ಮಾಧ್ಯಮ ಮಂಗಳ

ಸಂಪುಟ: 12 ಸಂಚಿಕೆ: 04 ಮಂಗಳೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ ದಿನಾಂಕ: 06-03-2017

ಥ್ರಿಲ್‌ಗಾಗಿ ಪ್ರಾಣ ಕಳೆದುಕೊಳ್ಳುವವರು

ಪುಟ – 2

ನೆನಪಿನ ಬುತ್ತಿ ತೆರೆಸುವ 'ಮಾವಿನ ಮಿಡಿ...'

ಪುಟ – 3

ಕಿರಿಕ್ ಕ್ರೇಝ್ ಹುಟ್ಟಿಸಿದ ಕಿರಿಕ್ ಪಾರ್ಟಿ

ಪುಟ – 4

ಬ್ರಹ್ಮಶ್ರೀ ನಾರಾಯಣಗುರು ಚಿಂತನೆಗಳು ಸಾರ್ವಕಾಲಿಕ: ಸಿದ್ದರಾಮಯ್ಯ

ಮಂಗಳಗಂಗೋತ್ರಿ : ಬ್ರಹ್ಮಶ್ರೀ ನಾರಾಯಣಗುರುಗಳ ಸಂದೇಶವು ಸಾಮಾಜಿಕ ಚಿಂತನೆಗಳನ್ನು ಒಳಗೊಂಡಿದೆ. ನಾರಾಯಣಗುರುಗಳ ವಿಚಾರಧಾರೆ ಹಾಗೂ ಚಿಂತನೆಗಳು ಸಾರ್ವಕಾಲಿಕವಾದುದು. ಅದನ್ನು ಯುವ ಜನಾಂಗಕ್ಕೆ ತಲುಪಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ಅಲ್ಲದೆ, ವಿಶ್ವವಿದ್ಯಾನಿಲಯಗಳು ವೈಚಾರಿಕ ಮತ್ತು ವೈಜ್ಞಾನಿಕ ಶಿಕ್ಷಣ ನೀಡಲು ಮುಂದಾಗಬೇಕು. ಅವರ ಚಿಂತನೆಗಳನ್ನು ಯುವ ವಿದ್ಯಾರ್ಥಿ ಸಮೂಹಕ್ಕೆ ತಿಳಿಸುವ ಕೆಲಸವನ್ನು ಅಧ್ಯಯನ ಪೀಠಗಳು ಮಾಡಲು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಕರೆ ನೀಡಿದರು.

ಅವರು ವಿಶ್ವವಿದ್ಯಾನಿಲಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಸ್ಪೃಶ್ಯತೆ ಎಂಬುದು ಮನೋರೋಗವಿದ್ದಂತೆ. ಮನುಷ್ಯರೇ ಸೃಷ್ಟಿಸಿದ ಈ ಮನೋರೋಗವನ್ನು ಹೋಗಲಾಡಿಸಲು ಮನಪರಿವರ್ತನೆಯೊಂದೇ ಚಿಕಿತ್ಸೆಯಾಗಿದೆ. ಈ ರೋಗವನ್ನು ಹೋಗಲಾಡಿಸದಿದ್ದರೆ ಸಮಾಜದಲ್ಲಿ ಸುಧಾರಣೆ ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕೇರಳದಲ್ಲಿ ದಲಿತರು ಹಾಗೂ ಶೂದ್ರರನ್ನು ಸವರ್ಣೀಯರು ತಾರತಮ್ಯದಿಂದ ಕಾಣುತ್ತಿದ್ದುದನ್ನು ಸಹಿಸದ ನಾರಾಯಣಗುರು ಅದರ ವಿರುದ್ಧ ಶಾಂತಿಯಿಂದ ಹೋರಾಟ ಆರಂಭಿಸಿದರು. ದಲಿತರಿಗೆ, ಹಿಂದುಳಿದ ವರ್ಗಕ್ಕೆ ಪ್ರವೇಶವಿಲ್ಲದ ದೇವಸ್ಥಾನವನ್ನೇ ಬಹಿಷ್ಕರಿಸಿದ್ದ ನಾರಾಯಣಗುರುಗಳು ಕೇರಳದಲ್ಲಿ ಸುಮಾರು 60 ದೇವಸ್ಥಾನಗಳನ್ನು ಸ್ಥಾಪಿಸಿ ಕ್ರಾಂತಿ ನಡೆಸಿದ್ದರು. ಅಂತಹ ಸಮಾಜ ಸುಧಾರಕರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪನೆಗೊಳ್ಳುತ್ತಿರುವುದು ಹೆಮ್ಮೆಯ ವಿಚಾರ ಎಂದು ಮುಖ್ಯಮಂತ್ರಿ ತಿಳಿಸಿದರು.

ಇದೇ ಸಂದರ್ಭದಲ್ಲಿ ವಿವಿಯ ಅನ್ವಯಿಕ ಸಸ್ಯಶಾಸ್ತ್ರ ವಿಭಾಗದ ನೂತನ ಕಟ್ಟಡವನ್ನು ಲೋಕಾರ್ಪಣೆ ಮಾಡಿದ ಮುಖ್ಯಮಂತ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ಪೀಠಗಳಿಗೆ ಸೂಕ್ತ ಆರ್ಥಿಕ ಸೌಲಭ್ಯ ಒದಗಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಉನ್ನತ ಶಿಕ್ಷಣ ಸಚಿವ

ಬಸವರಾಜ ರಾಯರೆಡ್ಡಿ ಮಾತನಾಡಿ ರಾಜ್ಯದ ವಿಶ್ವವಿದ್ಯಾನಿಲಯಗಳ ಪೈಕಿ ಮಂಗಳೂರು ವಿವಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಮೊದಲ ಸ್ಥಾನದಲ್ಲಿದೆ. ಉನ್ನತ ಶಿಕ್ಷಣ ಪಡೆಯುತ್ತಿರುವವರಲ್ಲಿ ಕರಾವಳಿಯ ಜನತೆ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಜಾಗತಿಕ ಮಟ್ಟದಲ್ಲಿ ಬೆಳೆಯಲು ಉನ್ನತ ಶಿಕ್ಷಣ ಪಡೆಯುವ ಅಗತ್ಯವಿದೆ. ರಾಜ್ಯ ಸರಕಾರ ಶಿಕ್ಷಣಕ್ಕಾಗಿ ಕಳೆದ 2016-17ನೇ ಸಾಲಿನಲ್ಲಿ ಸುಮಾರು 25 ಸಾವಿರಕೋಟಿ ನೀಡಿದೆ. ಬೆಂಗಳೂರಿನಲ್ಲಿ ಅಂಬೇಡ್ಕರ್ ಹೆಸರಿನಲ್ಲಿ ಹೊಸದಾಗಿ ಅಂತರಾಷ್ಟ್ರೀಯ ಮಟ್ಟದ 'ಸ್ಕೂಲ್ ಆಫ್ ಇಕನಾಮಿಕ್ಸ್' ತೆರೆಯಲು ಸಿದ್ಧತೆ ನಡೆಸಲಾಗಿದೆ ಎಂದು ಪ್ರಕಟಿಸಿದರು. ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಆಯೋಜಿಸಿರುವ ಅಂತರಾಷ್ಟ್ರೀಯ ಮಟ್ಟದ ಮಾಡ್ಯುಲರ್‌ಪ್ರಯೋಗಾಲಯಗಳನ್ನು ಅವರು ಸಾಂಕೇತಿಕವಾಗಿ ಉದ್ಘಾಟಿಸಿದರು. ವಿಶ್ವವಿದ್ಯಾನಿಲಯದ ಪ್ರಸಾರಾಂಗದ ರಜತ ಮಹೋತ್ಸವದ ಅಂಗವಾಗಿ ಪ್ರಸಾರಾಂಗದ ಗ್ರಂಥ ಸರಣಿಯ 19 ವಿಭಿನ್ನ ಪುಸ್ತಕಗಳನ್ನು ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಹಾಗೂ ವಿಶ್ರಾಂತ ಕುಲಪತಿ ಪ್ರೊ.ಬಿ.ವಿವೇಕ ರೈ ಅವರು ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ, ಅಧ್ಯಯನ ಪೀಠಗಳು ಇಂದು ಸರಕಾರದ ಅನುದಾನದ ಕೊರತೆಯಿಂದ 'ಬಡ್ಡಿ' ಪೀಠಗಳಾಗುತ್ತಿವೆ. ಬಡ್ಡಿಯಿಂದ ಪೀಠಗಳನ್ನು ಮುನ್ನಡೆಸುವಂತಹ ಸ್ಥಿತಿ ಇದೆ. ಹಲವು ಅಧ್ಯಯನ ಪೀಠಗಳಿಗೆ ಹಣಕಾಸಿನ ತೀವ್ರ ಕೊರತೆ ಇದೆ. ಆದ್ದರಿಂದ ಪೀಠಗಳು ಬಡ್ಡಿಯಿಂದ ನಡೆಯುವ ಬದಲು ಅಸಲಿನಿಂದ ನಡೆಯುವಂತಾಗಲಿ, ಜೊತೆಗೆ ಸಾಂಕೇತಿಕ ಪೀಠವಾಗದೆ ಸಾರ್ಥಕ ಪೀಠಗಳಾಗಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ಶಿಷ್ಯವೇತನರಹಿತ ಸಂಶೋಧನಾ ವಿದ್ಯಾರ್ಥಿಗಳಿಗೆ ಮಂಗಳೂರು ವಿವಿ ಸಂಶೋಧನಾ ಶಿಷ್ಯವೇತನ ನೀಡಿಕೆ ಯೋಜನೆಯನ್ನು ಆರಂಭಿಸಲಾಯಿತು.

ದ.ಕ ಜಿಲ್ಲಾ ಉಸ್ತುವಾರಿ ಸಚಿವ ಬಿ ರಮಾನಾಥ ರೈಯವರು 2016-17 ನೇ ಸಾಲಿನಲ್ಲಿ ರಾಷ್ಟ್ರಮಟ್ಟದಲ್ಲಿ ದಾಖಲೆ ನಿರ್ಮಿಸಿರುವ ಮಂಗಳೂರು ವಿವಿಯ ಸಾಧಕ ಕ್ರೀಡಾಪಟುಗಳನ್ನು ಸನ್ಮಾನಿಸಿದರು.

ಮಂಗಳೂರು ವಿವಿ ಕುಲಪತಿ ಪ್ರೊ.ಕೆ.ಭೈರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿವಿಯ ಕುಲಸಚಿವ ಪ್ರೊ.ಕೆ.ಎಂ.ಲೋಕೇಶ್, ಪ್ರಸಾರಾಂಗದ ನಿರ್ದೇಶಕ ಪ್ರೊ.ಇಸ್ಮಾಯಿಲ್.ಬಿ, ಶಾಸಕ ವಿನಯ್‌ಕುಮಾರ್ ಸೊರಕೆ, ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ನಿರ್ದೇಶಕ ಮುದ್ದು ಮೂಡುಬೆಳ್ಳೆ, ಪರೀಕ್ಷಾಂಗ ಕುಲಸಚಿವ ಪ್ರೊ. ಎ.ಎಂ.ಖಾನ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಿ.ಆರ್. ಅಂಬೇಡ್ಕರ್ ಓರ್ವ ಜಾಗತಿಕ ಆದರ್ಶದ ವ್ಯಕ್ತಿ: ಪ್ರೊ.ಕುಮಾರ್

ಮಂಗಳಗಂಗೋತ್ರಿ: ಡಾ.ಬಿ.ಆರ್. ಅಂಬೇಡ್ಕರ್ ಓರ್ವ ರಾಷ್ಟ್ರೀಯ ಆದರ್ಶದ ವ್ಯಕ್ತಿ ಮಾತ್ರವಲ್ಲ; ಅವರೊಬ್ಬ ಜಾಗತಿಕ ಆದರ್ಶದ ವ್ಯಕ್ತಿ ಎಂದು ದೆಹಲಿಯ ಜವಾಹರಲಾಲ್ ನೆಹರು ವಿವಿ(ಜೆ.ಎನ್.ಯು)ಯ ಸಮಾಜಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ.ವಿವೇಕ್ ಕುಮಾರ್ ಅಭಿಪ್ರಾಯಪಟ್ಟರು.

ಮಂಗಳಾ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಬಿ.ಆರ್. ಅಂಬೇಡ್ಕರ್‌ರವರ ದೃಷ್ಟಿಕೋನದಲ್ಲಿ ದಲಿತ ರಾಜಕಾರಣ ಮತ್ತು ಭಾರತೀಯರ ಸಬಲೀಕರಣ ಮತ್ತು ಅಂಬೇಡ್ಕರ್‌ರವರ 60ನೇ ಮಹಾಪರಿನಿರ್ವಾಣ ದಿನದ ಕುರಿತ ರಾಷ್ಟ್ರೀಯ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ದಲಿತರ ನಾಯಕರಾಗಿ ಚಿರಪರಿಚಿತರು. ಅವರು ಭಾರತೀಯ ಸಂವಿಧಾನದ ನಿರ್ಮಾತೃ ಅಷ್ಟೇ ಅಲ್ಲ; ರಾಷ್ಟ್ರದ ನಿರ್ಮಾಪಕರೂ ಹೌದು. ಅವರು ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯಂತೆಯೇ ಸಮಾಜದ ಬಗೆಗೂ ಧ್ವನಿ ಎತ್ತಿದರು. ವೈಯಕ್ತಿಕ ಹೊಣೆಗಾರಿಕೆಯು ಎಲ್ಲಾ ದಲಿತರು, ಹಿಂದುಳಿದ ವರ್ಗ ಹಾಗೂ ಪ್ರತಿಯೊಬ್ಬರಗೂ ಅಗತ್ಯ ಎಂಬುದನ್ನು ಪ್ರತಿಪಾದಿಸಿದರು ಎಂದು ಅವರು ತಿಳಿಸಿದರು.

ಅಂಬೇಡ್ಕರ್‌ರವರ ರಾಜಕೀಯ ಮತ್ತು ಸಮಾಜ ಸುಧಾರಣಾ ಚಳವಳಿಗಳ ಬಗ್ಗೆ ಬೆಳಕು ಚೆಲ್ಲಿದ ಪ್ರೊ. ಕುಮಾರ್, ಅವರ ರಾಷ್ಟ್ರ ನಿರ್ಮಾಣ ಪ್ರಕ್ರಿಯೆ ಮತ್ತು ಜಗತ್ತಿನ 91 ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿ ಭಾರತದ ಸಂವಿಧಾನವನ್ನು ರೂಪಿಸಿದ ಬಗೆಗೂ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿವಿಯ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬಿ.ಆರ್. ಅಂಬೇಡ್ಕರ್‌ರವರ 60ನೇ ಮಹಾಪರಿನಿರ್ವಾಣದ ಜೊತೆಗೆ ಇದು ಅವರ 125ನೇ ಜನ್ಮ ವರ್ಷೋತ್ಸವವೂ ಹೌದು. ಈ ಸಂದರ್ಭದಲ್ಲಿ ಮಂಗಳೂರು ವಿವಿಯಲ್ಲಿ ಹಾಗೂ ಅಧೀನದಲ್ಲಿ ಬರುವ ಇತರ ಕಾಲೇಜುಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಯ ಕುಲಸಚಿವ ಪ್ರೊ.ಕೆ.ಎಂ.ಲೋಕೇಶ್, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ವಿಶ್ವನಾಥ ಉಪಸ್ಥಿತರಿದ್ದರು.

ಅನುವಂಶೀಯ ಅಸ್ಥಿರತೆ ಮತ್ತು ಮಾನವ ರೋಗಗಳು ಎಂಬುದು ಪ್ರಮುಖ ಸಂಶೋಧನಾ ವಿಷಯವಾಗಿದೆ: ಪ್ರೊ.ಕೆ.ಭೈರಪ್ಪ

ಮಂಗಳಗಂಗೋತ್ರಿ: ಮಾನವ ರೋಗಗಳು ಕೇವಲ ಜೀವನ ವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನವಲ್ಲ. ಇದು ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ಇತರೆ ಅಧ್ಯಯನ ವಿಷಯಗಳಿಗೂ ಸಂಬಂಧಿಸಿದೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಕೆ.ಭೈರಪ್ಪ ಅಭಿಪ್ರಾಯಪಟ್ಟರು.

ಅವರು ಇತ್ತೀಚೆಗೆ ವಿ.ವಿಯ ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಆಶ್ರಯದಲ್ಲಿ ನಡೆದ ಅನುವಂಶಿಕ (ಜಿನೋಮಿಕ್) ಅಸ್ಥಿರತೆ ಮತ್ತು ಮಾನವ ರೋಗಗಳು ಕುರಿತ ಅಂತರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇತ್ತೀಚಿನ ದಿನಗಳಲ್ಲಿ ಎಬೋಲಾ, ಥೈರಾಯ್ಡ್ ಮತ್ತು ಸಕ್ಕರೆ ಖಾಯಿಲೆಗಳು ಸಾಮಾನ್ಯ ರೋಗಗಳಾಗಿವೆ. ಇವುಗಳ ನಿಯಂತ್ರಣ ಕುರಿತಾದ ಸಂಶೋಧನೆಗಳು ಸಾಕಷ್ಟು ನಡೆಯುತ್ತಿವೆ. ಸಮಾಜದಲ್ಲಿ ಇಂತಹ ರೋಗಗಳನ್ನು ಒಳಗೊಂಡ ಸಾಮಾಜಿಕ ಜವಾಬ್ದಾರಿಗಳನ್ನು ಜನರು ಅರ್ಥೈಸಿಕೊಂಡು ಈ ಬಗ್ಗೆ ಕಾಳಜಿ ವಹಿಸಿಕೊಳ್ಳಲು ಅವರು ಕರೆ ನೀಡಿದರು.

ವಿವಿಯು ಸಂಶೋಧನಾತ್ಮಕ ಕೆಲಸಗಳಿಗೆ ಬಹಳಷ್ಟು ಮಹತ್ವ ನೀಡುತ್ತಿದೆ. ಅಂತರಾಷ್ಟ್ರೀಯ ಗುಣಮಟ್ಟದ ವಿಜ್ಞಾನ ಪ್ರಯೋಗಾಲಯಗಳು ನಿರ್ಮಾಣಗೊಂಡು ಸಂಶೋಧನಾ

ಕೆಲಸಗಳು ಉತ್ತಮ ರೀತಿಯಲ್ಲಿ ಸಾಗುತ್ತಿವೆ. ರೇಡಿಯೇಶನ್ ಫಿಸಿಕ್ಸ್ ಬಗ್ಗೆ ವಿವಿಯು ಭಾರತದಲ್ಲೇ ಪ್ರಮುಖವಾಗಿ ಗುರುತಿಸಿಕೊಂಡಿದೆ ಎಂದು ಅವರು ಹೇಳಿದರು.

ನ್ಯಾಷನಲ್ ಯುನಿವರ್ಸಿಟಿ ಆಫ್ ಸಿಂಗಾಪುರ್‌ನ ಡಾ. ಪ್ರಕಾಶ್ ಹಂದೆ ಉಪನ್ಯಾಸ ನೀಡಿ, ಮಾನವನ ಅನೇಕ ರೋಗಗಳಿಗೆ ಅನುವಂಶೀಯ ಅಸ್ಥಿರತೆಯೇ ಪ್ರಮುಖ ಕಾರಣ. ಡಿಎನ್‌ಎ ಅಥವಾ ಕ್ರೋಮೋಸೋಮ್‌ಗಳಲ್ಲಿ ಉಂಟಾಗುವ ಅಸ್ಥಿರತೆಯನ್ನು ಪತ್ತೆಹಚ್ಚಲು ತಂತ್ರಜ್ಞಾನವು ಸಾಕಷ್ಟು ಅಭಿವೃದ್ಧಿಯಾಗಿದ್ದು, ಮಾನವನ ಕಾಯಿಲೆಗಳನ್ನು ಪತ್ತೆಹಚ್ಚುವಲ್ಲಿ ಸಹಕಾರಿಯಾಗಿವೆ. ಆ ಮೂಲಕ ರೋಗಗಳಿಗೆ ಸೂಕ್ತ ಚಿಕಿತ್ಸೆ ನೀಡುವಲ್ಲಿ ವೈದ್ಯಕೀಯ ಕ್ಷೇತ್ರ ನೆರವಾಗಿದೆ ಎಂದು ತಿಳಿಸಿದರು.

ಆಸ್ಟ್ರಿಯಾದ ವಿಯೆನ್ನಾ ಮೆಡಿಕಲ್ ಯುನಿವರ್ಸಿಟಿಯ ಡಾ. ಸಿಗ್ನಿಫ್ರೈಡ್ ಕ್ನಾಸ್ಮುಲ್ಲರ್ ಅವರು 'ಡಿಎನ್‌ಎ ಮೇಲೆ ಪೋಷಕಾಂಶಗಳ ಪರಿಣಾಮ ಮತ್ತು ಕ್ಯಾನ್ಸರ್' ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿ, ಮನುಷ್ಯನ ಆಹಾರ ಕ್ರಮ ಮತ್ತು ಕ್ಯಾನ್ಸರ್ ಕಾಯಿಲೆಗೆ ನಿಕಟವಾದ ಸಂಬಂಧವಿದೆ. ಪ್ರಕೃತಿ ನೀಡಿರುವ ಸಾತ್ವಿಕ ಆಹಾರ ನಮ್ಮ ದೇಹಕ್ಕೆ ಅಗತ್ಯವಿರುವ ಪೌಷ್ಟಿಕಾಂಶಗಳನ್ನು ಮಾತ್ರ ಪೂರೈಸುವುದಲ್ಲದೇ, ಕ್ಯಾನ್ಸರ್‌ಗಳನ್ನು ಪ್ರತಿಬಂಧಿಸುವ ಅನೇಕ ಅಂಶಗಳೂ ಅಡಗಿವೆ ಎಂದರು.

(ಪುಟ–3)

ಸಂಪಾದಕೀಯ

ಇತಿಹಾಸ ನಿರ್ಮಿಸಿದ ಇಸ್ರೋ

ಅದು ಜಗತ್ತೇ ಭಾರತದತ್ತ ನಿಬ್ಬೆರಗಾಗಿ ನೋಡಿದ ಕ್ಷಣ. ಭಾರತವು ತನಗೆ ತಾನೇ ಹೆಮ್ಮೆ ಪಟ್ಟುಕೊಳ್ಳುವ ಸಾಧನೆ. ಫೆಬ್ರವರಿ 15 ರ ಬೆಳಗ್ಗೆ ಜಗತ್ತಿನ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ 104 ಉಪಗ್ರಹಗಳನ್ನು ಒಂದೇ ರಾಕೆಟ್‌ನಲ್ಲಿ ಕಕ್ಷೆಗೆ ಹಾರಿಬಿಡುವ ಮೂಲಕ ನಮ್ಮ ದೇಶ ವಿಜ್ಞಾನ ಲೋಕದಲ್ಲಿ ಚರಿತ್ರೆ ಸೃಷ್ಟಿಸಿದೆ. ಪಿಎಸ್‌ಎಲ್‌ವಿ(ಪೋಲಾರ್ ಸಾಟಲೈಟ್ ಲಾಂಚಿಂಗ್ ವೆಹಿಕಲ್)–ಸಿ 37 ರಾಕೆಟ್ 39 ನೇ ಸಲ ಉಪಗ್ರಹಗಳನ್ನು ಕಕ್ಷೆಗೆ ಕರಾರುವಕ್ಕಾಗಿ ತಲುಪಿಸಿದೆ. ಈ ಉಪಗ್ರಹಗಳ ಉಡಾವಣೆಗೆ ತೆಗೆದುಕೊಂಡ ಸಮಯ ಕೇವಲ 28 ನಿಮಿಷಗಳು! ಒಟ್ಟು 1378 ಕೆ.ಜಿ. ತೂಕ ಹೊಂದಿದ್ದ 104 ಉಪಗ್ರಹಗಳು ನಾಲ್ಕು ಹಂತಗಳಲ್ಲಿ ಕೆಲವೇ ಸೆಕೆಂಡ್‌ಗಳ ಅಂತರದಲ್ಲಿ ಪರಸ್ಪರ ತಾಕದಂತೆ ಉಪಗ್ರಹಗಳನ್ನು ನಾಜೂಕಾಗಿ ಕಕ್ಷೆಗೆ ಸೇರಿಸಿದ್ದು ವಿಶೇಷ. ಅತಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಉಪಗ್ರಹಗಳನ್ನು ಉಡಾಯಿಸಿದ ಗರಿಮೆಯೂ ಇಸ್ರೋಗೆ ಇದೆ. 'ಸ್ಪೇಸ್ ಎಕ್ಸ್'ನ ವೆಚ್ಚಕ್ಕೆ ಹೋಲಿಸಿದರೆ ಇಸ್ರೋದ ಉಡಾವಣಾ ವೆಚ್ಚ ಶೇಕಡಾ 33ರಷ್ಟು ಮಾತ್ರ ! ಉಳಿತಾಯ ಮಾಡುವ ಈ ಆಯಾಮವೇ ಇಸ್ರೋಗೆ ಶ್ರೀರಕ್ಷೆಯಾಗಿದೆ.

ಈ ಹಿಂದೆ ಭಾರತದ ಹಲವು ವಿಜ್ಞಾನ ಸಂಸ್ಥೆಗಳಿಗೆ ಉನ್ನತ ತಂತ್ರಜ್ಞಾನ ವರ್ಗಾವಣೆ ಮಾಡಲು ಅಮೆರಿಕ ನಿರಾಕರಿಸಿತ್ತು. ರಷ್ಯಾ ಸಹ 'ಕ್ರಯೋಜೆನಿಕ್' ರಾಕೆಟ್ ತಂತ್ರಜ್ಞಾನ ವರ್ಗಾವಣೆಗೆ ಹಿಂದೇಟು ಹಾಕಿತ್ತು. ಇಸ್ರೋದ ಈ ಚಾ–ರಿತ್ರಿಕ ಸಾಧನೆ ತಾಂತ್ರಿಕವಾಗಿ ಪ್ರಬಲವಾಗಿದ್ದ ಅಮೆರಿಕ, ರಷ್ಯಾದಂತಹ ಹಲವು ರಾಷ್ಟ್ರಗಳು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಭಾರತವು ಪಿಎಸ್‌ಎಲ್‌ವಿಯನ್ನು ತನ್ನ ಸ್ವೇಚ್ಛೆಯ ಸಾಮರ್ಥ್ಯವನ್ನು ತೋರ್ಪಡಿಸಲು ಬಳಸಿಕೊಳ್ಳದೆ ವಿದೇಶಿ ಉಪಗ್ರಹಗಳ ಉಡಾವಣೆಗೂ ಅವಕಾಶ ಕಲ್ಪಿಸಿಕೊಟ್ಟಿದೆ. ಈ ಮೊದಲು 19 ರಾಷ್ಟ್ರಗಳು 40ಕ್ಕೂ ಹೆಚ್ಚು ಉಪಗ್ರಹಗಳನ್ನು ಪಿಎಸ್‌ಎಲ್‌ವಿ ಮೂಲಕ ಕಕ್ಷೆಗೆ ಸೇರಿಸಿವೆ. ಅಲ್ಲದೆ ಈ ಐತಿಹಾಸಿಕ ಸಾಧನೆಯ 104 ಉಪಗ್ರಹಗಳಲ್ಲಿ 101 ಉಪಗ್ರಹಗಳು ವಿದೇಶಿ ಉಪಗ್ರಹಗಳಾಗಿವೆ.

2014 ರಲ್ಲಿ ರಷ್ಯಾ 37 ಉಪಗ್ರಹಗಳನ್ನು ಉಡಾವಣೆ ಮಾಡಿತ್ತು. ಆದರೆ ಭಾರತ 104 ಉಪಗ್ರಹಗಳನ್ನು ಕಕ್ಷೆಗೆ ಹಾರಿಸಿರುವುದರಿಂದ ಇಸ್ರೋದ ಈ ಸಾಧನೆ ಅತಿ ಮಹತ್ವದ್ದಾಗಿದೆ. 104 ಉಪಗ್ರಹಗಳ ಪೈಕಿ 96 ಅಮೆರಿಕಾದ ಎರಡು ಸಂಸ್ಥೆಗಳಿಗೆ ಸೇರಿದ್ದರೆ, ತಲಾ ಒಂದೊಂದು ಉಪಗ್ರಹಗಳು ಇಸ್ರೇಲ್, ಖಜಕಿಸ್ತಾನ, ನೆದರ್ಲೆಂಡ್, ಸ್ವಿಜರ್ಲೆಂಡ್ ಹಾಗೂ ಯುಎಇಗೆ ಸೇರಿವೆ.

ಇಸ್ರೋ ಸಾಧನೆಯನ್ನು ಮೆಚ್ಚಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಮತ್ತು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಪ್ರಶಂಸಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಪ್ರಧಾನಿಯವರು ತಮ್ಮ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲಿ ಇಸ್ರೋ ಸಾಧನೆಯ ಕುರಿತು ಪ್ರಸ್ತಾಪಿಸಿ ಭಾರತ ವಿಜ್ಞಾನ ರಂಗದಲ್ಲಿ ಮತ್ತಷ್ಟು ಸಾಧನೆಗಳನ್ನು ಮಾಡಬೇಕು. ದೇಶಕ್ಕೆ ಇನ್ನೂ ಹೆಚ್ಚಿನ ವಿಜ್ಞಾನಿಗಳ ಅಗತ್ಯವಿದೆ ಮತ್ತು ಯುವಜನತೆಗೆ ವಿಜ್ಞಾನದ ಕುರಿತು ಆಸಕ್ತಿ ಹೆಚ್ಚಬೇಕು ಎಂದು ಕರೆ ನೀಡಿದ್ದಾರೆ.

ದೇಶಿ ಮಾಧ್ಯಮಗಳು ಇಸ್ರೋ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿವೆ. ಅಮೆರಿಕಾದ 'ನ್ಯೂಯಾರ್ಕ್ ಟೈಮ್ಸ್' ಭಾರತವನ್ನು ಬಾಹ್ಯಾಕಾಶ ಸಾಧನೆಗಳ 'ಕೀ ಪ್ಲೇಯರ್' ಎಂದು ಬಣ್ಣಿಸಿದರೆ, ಚೀನಾದ ಸರಕಾರಿ ಸ್ವಾಮ್ಯದ ಪತ್ರಿಕೆಯಾದ 'ಗ್ಲೋಬಲ್ ಟೈಮ್ಸ್' ಭಾರತದ ಈ ಸಾಧನೆಯು ಚೀನಾದ ಬಾಹ್ಯಾಕಾಶ ಉದ್ಯಮಕ್ಕೆ ಎಚ್ಚರಿಕೆಯ ಕರೆಗಂಟೆಯಾಗಿದೆ. ಈ ವಿಷಯದಲ್ಲಿ ನಮ್ಮ ದೇಶವು ಹಲವು ಪಾಠಗಳನ್ನು ಕಲಿಯಬೇಕಾಗಿದೆ ಎಂದು ತನಗೆ ತಾನೇ ಎಚ್ಚರಿಕೆಯನ್ನು ನೀಡಿದೆ.

ಹಲವಾರು ರಾಷ್ಟ್ರಗಳು ಇಸ್ರೋದ ಮುಂದಿನ ಯೋಜನೆಗಳಿಗೆ ಸಹಕಾರ ನೀಡಲು ಮುಂದೆ ಬಂದಿವೆ. ಇಂತಹ ಬಾಹ್ಯಾಕಾಶ ಸಂಶೋಧನಾ ಚಟುವಟಿ–ಕೆಗಳಲ್ಲಿ ಯುವಜನರು ಹೆಚ್ಚಿನ ಆಸಕ್ತಿ ತೋರುವಂತಾಗಿದ್ದು ಉತ್ತಮ ಬೆಳವಣಿಗೆ. ವೈಜ್ಞಾನಿಕ ಸಂಶೋಧನೆಯಲ್ಲಿ ಭಾರತದ ಹೆಸರು ರಾರಾಜಿಸಲು ಇಂತಹ ಸಾಧನೆಗಳು ಮತ್ತಷ್ಟು ಹೆಚ್ಚಲಿ ಎಂಬುದು ನಮ್ಮ ಹಾರೈಕೆ.

ಸಂಪಾದಕರಿಗೆ ಪತ್ರ

ಮಾನವಿಕ ವಿಭಾಗದ ಮುಂಭಾಗದಲ್ಲಿ ಹಸಿರ ಸಿರಿಯ ಅಗತ್ಯ

ಮಂಗಳೂರು ವಿವಿಯ ಬಹುತೇಕ ಎಲ್ಲಾ ವಿಭಾಗಗಳ ಮುಂಭಾಗವೂ ಗಿಡ–ಮರಗಳ ಸಹಿತ ಹಸಿರಿನಿಂದ ಕಂಗೊಳಿಸುತ್ತಿದೆ. ಆದರೆ 'ಮಾನವಿಕ ವಿಭಾಗ'ದ ಮುಂಭಾಗ ಮಾತ್ರವೇ ಹಸಿರು ಮುಕ್ತವಾಗಿ ಬರಿದಾಗಿ ಕಾಣಿಸುತ್ತಿದೆ. ಹಸಿರ ಪರಿಸರವು ಸೌಂದರ್ಯದ ಸಂಕೇತವಷ್ಟೇ ಆಗಿರದೆ, ಶೈಕ್ಷಣಿಕ ವಾತಾವರಣಕ್ಕೂ ಪೂರಕವೆನಿಸುತ್ತದೆ. ಬರೀ ಉತ್ತಮ ಕಟ್ಟಡಗಳು ಮಾತ್ರ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುತ್ತದೆ ಎಂದರೆ ಸಾಲದು. ಕಲಿಕೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮನಸ್ಸಿಗೆ ಚೈತನ್ಯ, ಜೀವಂತಿಕೆ ತುಂಬುವಲ್ಲಿ ಪ್ರಕೃತಿಯ ಪಾತ್ರ ಮಹತ್ವದ್ದು. ವಿದ್ಯಾರ್ಥಿಗಳು ಸದಾ ಲವಲವಿಕೆಯಿಂದಿರಲು ಪ್ರಕೃತಿಯೂ ಒಂದರ್ಥದಲ್ಲಿ ಕಾರಣವೆನಿಸುತ್ತದೆ. ಹೀಗಾಗಿ ಗಿಡ–ಮರಗಳಿಲ್ಲದೆ ಒಣಗಿರುವ ಮಾನವಿಕ ವಿಭಾಗದ ಮುಂಭಾಗದಲ್ಲಿ ಗಿಡಗಳನ್ನು ನೆಟ್ಟು ಪ್ರಕೃತಿ ಹಸಿರು ಹೊದಿಸಿ ಸೌಂದರ್ಯ ವೃದ್ಧಿಸುವಲ್ಲಿ ವಿವಿ ಕ್ರಮ ಕೈಗೊಳಗಳುವುದಾಗಿ ಆಶಿಸೋಣವೇ.

–ಜಯರಾಜ್

"ಥ್ರಿಲ್‌ಗಾಗಿ ಪ್ರಾಣ ಕಳೆದುಕೊಳ್ಳುವವರು"

ಇತ್ತೀಚಿನ ದಿನಗಳಲ್ಲಿ ಯುವಕರು ಹಠಾತ್ ವಿಧಿವಶರಾದರೆ ಯಾವುದೇ ರೋಗವಿಲ್ಲದೆ, ನೋಡಲು ಸದೃಢರಂತೆ ಕಾಣುವ ವಿಷಯ ನಮ್ಮನ್ನು ನೋಯಿಸುವಂತಹ ಸಂಗತಿಯಾಗಿದೆ. ಹೃದಯಘಾತ ಈಗ ಮಾಮೂಲಿಯಾದುದರಿಂದ ಯುವಕರ ಸಾವನ್ನು ಅದೇ ಗುಂಪಿಗೆ ಸೇರಿಸುತ್ತಾರೆ. ಆದರೆ ದಿನ ಕಳೆದಂತೆ ನಮಗೆ ತಿಳಿಯುವುದು ಇದೊಂದು ಅಮಲು ಪದಾರ್ಥದ ವಿಪರೀತ ಸೇವನೆಯಿಂದ ಸಂಭವಿಸಿದ ಸಾವು ಎಂದು. ಯುವಕರು ಈ ಚಟಕ್ಕೆ ಬಲಿ ಬಿದ್ದು ತಮ್ಮತನವನ್ನೆಲ್ಲ ಕಳೆದುಕೊಳ್ಳುತ್ತಿರುವ ದುಃಖಕರ ವಿಷಯ. ವಿದ್ಯಾರ್ಥಿ ಜೀವನದಲ್ಲೇ ಮೋಜಿಗಾಗಿ ಇದರ ಚಟ ಹತ್ತಿಸಿಕೊಳ್ಳುವ ಯುವ ಸಮೂಹವು 30–35 ರ ಅಂದಾಜಿಗೆ ತಮ್ಮ ಸುಂದರ ಯೌವ್ವನವನ್ನು ಸದ್ದಿಲ್ಲದೆ ನಾಶ ಮಾಡುತ್ತಿದ್ದಾರೆ.

ಅಮಲು ಪದಾರ್ಥಗಳು ನಿತ್ಯ ಜೀವನದಲ್ಲಿ ಅವಿಭಾಜ್ಯ ಅಂಗವಾಗಿ ನೆಲೆಗೊಂಡಿದೆ. ಸಾಮಾಜಿಕ ಜೀವನದ ಅನೇಕ ದುಷ್ಕೃತ್ಯಗಳ ಹಿನ್ನೆಲೆಯಲ್ಲಿ ಅಮಲು ಪದಾರ್ಥಗಳ ನಿಗೂಢ ಪಾತ್ರವಿದೆ. ಪುರಾತನ ಕಾಲದಿಂದಲೂ ಈ ದುಶ್ಚಟ ಮನುಷ್ಯರಲ್ಲಿ ಮನೆ ಮಾಡಿಕೊಂಡಿದೆ. ಅಮಲಿನಲ್ಲಿ ಆನಂದವನ್ನು ಕಳೆದುಕೊಳ್ಳುತ್ತಿದ್ದ ಪ್ರಾಚೀನ ಜನತೆ ಇದನ್ನು ಜೀವನಾಮೃತವೆಂದು ಪರಿಗಣಿಸಿತ್ತು. ಚಕ್ರವರ್ತಿಗಳು ಮತ್ತು ಸಾಮಂತ ರಾಜರುಗಳಲ್ಲಿ ಅಮಲು ಪದಾರ್ಥ ವಿಶೇಷ ಪ್ರಭಾವ ಬೀರಿತ್ತು. ಅಮಲು ಪದಾರ್ಥದೊಂದಿಗೆ ಅಮಿತಾಸಕ್ತಿ ನಿಮಿತ್ತ ತನ್ನ ಸಮಾಧಿಯ ಮೇಲೆ ದ್ರಾಕ್ಷೆಯ ಸಸಿಗಳನ್ನು ನೆಡಬೇಕೆಂದು ಆದೇಶಿಸಿದವರು ಕೂಡಾ ಅವರಲ್ಲಿದ್ದರು.

ಸಮಾಜ ಜೀವಿಯಾದ ಮನುಷ್ಯನು ತ್ವರಿತವಾಗಿ ಅಮಲು ಪದಾರ್ಥಗಳ ಪ್ರಭಾವಕ್ಕೊಳಗಾಗುತ್ತಾನೆ. ಒಮ್ಮೆ ಇದರ ದಾಸನಾದರೆ ನಂತರ ಅಮಲು ಪದಾರ್ಥವಿಲ್ಲದೆ ಬದುಕಲಾರ ಎಂಬ ಪರಿಸ್ಥಿತಿಗೆ ತಲುಪುತ್ತಾನೆ. ಅಮಲು ಪದಾರ್ಥದೊಂದಿಗಿರುವ ಅಮಲು ಛಾಯೆಯು ಎಲ್ಲಾ ವಿಧದ ಸದಾಚಾರ ಮೌಲ್ಯಗಳಿಗೆ ಕಂಟಕಪ್ರಾಯವಾಗಿದೆ. ಮನುಷ್ಯನ ವಿವೇಚನಾ ಶಕ್ತಿಯನ್ನು ನಾಶಪಡಿಸುವ ಇದು ಅವನನ್ನು ದುಷ್ಕಾರ್ಯಗಳ ಹಿಂದೆ ಅಲೆಯುವಂತೆ ಮಾಡುತ್ತದೆ. ಅಮಲು ಪದಾರ್ಥವು ಸಾಮಾಜಿಕ, ಸಾಂಸ್ಕೃತಿಕ, ಆರೋಗ್ಯ ರಂಗದಲ್ಲಿ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ.

ಬಹುತೇಕ ಯುವಕರು ಇತ್ತೀಚೆಗೆ ಈ ವ್ಯಸನಕ್ಕೆ ತಮ್ಮ ಯೌವ್ವನದ ಅಮೂಲ್ಯ ಭಾಗವನ್ನು ವ್ಯರ್ಥಗೊಳಿಸುತ್ತಿದ್ದಾರೆ. ಇದಕ್ಕಾಗಿ ಅವರು ದುಡಿತದ ಹಣವನ್ನೆಲ್ಲಾ ನೀರಿನಂತೆ ಪೋಲು ಮಾಡುತ್ತಾರೆ. ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಲ್ಲಿ ಈ ಚಟ ವ್ಯಾಪಕವಾಗಿ ಹರಡಿಕೊಂಡಿದೆ. ಪಾಲಕರು ತಮ್ಮ ಮಕ್ಕಳು ಹಣವನ್ನು ಏನು ಮಾಡುತ್ತಾರೆಂದು ವಿಚಾರಿಸದಿರುವುದು ಅವರಿಗೆ ವರದಾನವಾಗಿ ಪರಿಣಮಿಸಿದೆ.

ಅಮಲು ವ್ಯಸನಕ್ಕೆ ಬಲಿಯಾದವರು ಅನೇಕ ಸಂಕೀರ್ಣ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದು ಸಾಮಾಜಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕವಾಗಿ ತಂದಿರುವ ಕೆಡುಕು ತುಂಬಾ ಅಪಾರವಾಗಿದೆ. ಅಮಲು ಪದಾರ್ಥಗಳ ಚಟವನ್ನು ಅಂಟಿಸಿಕೊಂಡವರು ಹಲವು ರೋಗಗಳಿಗೆ ತುತ್ತಾಗುತ್ತಾರೆ. ವೈಯಕ್ತಿಕವಾಗಿ ಎಷ್ಟೇ ಗೌರವಾನ್ವಿತರಾಗಿದ್ದವರನ್ನು ಅಧಃಪತನಕ್ಕಿಳಿಸಿ, ಆತನನ್ನು ಹಾಸ್ಯಾಸ್ಪದ ವ್ಯಕ್ತಿಯಾಗಿ ಮಾಡುತ್ತದೆ. ಮನುಷ್ಯರಲ್ಲಿ ಅಕ್ರಮ ಚಟುವಟಿಕೆಗಳನ್ನು ಬೆಳೆಸುವಲ್ಲಿ ಅಮಲು ಪದಾರ್ಥಗಳ ಪಾತ್ರ ಅಪಾರ. ಕೊಲೆ, ದರೋಡೆ, ಅತ್ಯಾಚಾರ, ಅಕ್ರಮ ಮೊದಲಾದ ಅಪರಾಧ ಕೃತ್ಯಗಳನ್ನೆಸೆಯುವ ಹೆಚ್ಚಿನವರು ಈ ಸಂದರ್ಭದಲ್ಲಿ ಅಮಲು ಪದಾರ್ಥವನ್ನು ಸೇವಿಸಿರುತ್ತಿದ್ದರೆಂದು ಸಮೀಕ್ಷೆಯಿಂದ ವ್ಯಕ್ತವಾಗಿದೆ. ಇದನ್ನು ಉಪಯೋಗಿಸುವವರಿಗೆ ರಕ್ತ ಸಂಬಂಧವನ್ನು ಕೂಡಾ ಮರೆತು ಅತ್ಯಂತ ನೀಚ ಕೃತ್ಯಕ್ಕಿಳಿಯಲು ಕೂಡಾ ಹೇಸುವುದಿಲ್ಲ. ಗಾಂಜಾ, ಅಫೀಮು ಸೇವಿಸುವ ಯುವ ಸಮೂಹ ನಮ್ಮ ಸುತ್ತಮುತ್ತ ಇದೆ. 'ಥ್ರಿಲ್' ಕಿಕ್‌ಗಾಗಿ ತಮ್ಮ ಅಮೂಲ್ಯವಾದ ಯೌವ್ವನವನ್ನು ನಾಶ ಮಾಡುತ್ತಿರುವ ಇಂತಹವರಿಂದ ಸಮಾಜಘಾತುಕ ಚಟುವಟಿಕೆ ನಿರಂತರವಾಗಿ ನಡೆಯುತ್ತಿದೆ. 'ಸುಖವೇ ಜೀವನದ ಪರಮ ಗುರಿ' ಎಂದು ನಂಬುವ ಈ ಸಮೂಹಕ್ಕೆ ಲೋಪದೋಷಗಳು ಯಾವುದೇ ಪರಿಣಾಮ ಬೀರದಿರುವುದು ಸಾಮಾಜಿಕ ದುರಂತವಾಗಿದೆ.

–ಮಾಲತಿ

ಬುದ್ಧಿವಂತರು ನಾವು...

ಜೀವವೈವಿಧ್ಯಗಳು ಅದರದ್ದೇ ಆದ ವ್ಯಾಪ್ತಿಯಲ್ಲಿ ವ್ಯವಸ್ಥಿತವಾಗಿ ರೂಪುಗೊಂಡಿದೆ. ವನ್ಯಜೀವಿಗಳು ನಗರಕ್ಕೆ ಲಗ್ಗೆ ಇಟ್ಟರೆ ಸಾಕು ಅನೇಕ ನಷ್ಟಗಳು, ಹಲವಾರು ಜೀವ ಹಾನಿಗಳು ಸಂಭವಿಸುತ್ತದೆ. ಅಪರೂಪಕ್ಕೆ ಕಂಡು ಬರುತ್ತಿದ್ದ ಇಂತಹ ಪ್ರಕರಣಗಳು ಇಂದು ಸಾಮಾನ್ಯವಾಗಿ ಬಿಟ್ಟಿದೆ.

ಇದಕ್ಕೆಲ್ಲ ಕಾರಣ ಮಾನವನೇ. ಆತನ ಸಂತೋಷಕ್ಕಾಗಿ ಪ್ರಾಣಿ ಪಕ್ಷಿಗಳ ಲೋಕವನ್ನು ನಾಶ ಮಾಡುತ್ತಿದ್ದಾನೆ. ಇದರಿಂದ ತನ್ನ ನೆಲೆಯನ್ನು ಕಳೆದುಕೊಂಡ ವನ್ಯಜೀವಿಗಳು ನಗರಕ್ಕೆ ದಾಳಿ ಇಡುತ್ತಿವೆ. ಇದು ದೊಡ್ಡ ಪ್ರಮಾಣದಲ್ಲಿ ಸುದ್ದಿಯಾಗುತ್ತಿವೆಯೇ ವಿನಃ ವನ್ಯಜೀವಿಗಳು ನಗರಕ್ಕೆ ಬಂದು ದಾಳಿ ಇಡಲು ಕಾರಣವೇನು ಎಂಬುದನ್ನು ಅರಿಯುವ ಪ್ರಯತ್ನ ನಡೆಯುತ್ತಿಲ್ಲ. ಮಾನವನ ಅತಿಯಾದ ಸ್ವಾರ್ಥವು ಅತನ ಅವನತಿಯುತ್ತಲೇ ಮುಖ ಮಾಡಿ ಅತನಿಗೇ ಮಾರಕವಾಗಿ ಪರಿಣಮಿಸುತ್ತಿರುವುದಕ್ಕೆ ಇದುವೇ ಒಂದು ಉತ್ತಮ ಉದಾಹರಣೆ. ಇಂದು ಪರಿಸರ ರಕ್ಷಣೆಗಾಗಿ ಇರುವಂತಹ ಕಾನೂನುಗಳನ್ನು ಗಾಳಿಗೆ ತೂರುವ ಮೂಲಕ ಪರಿಸರ ನಾಶದ ಅನೇಕ ಪ್ರಕ್ರಿಯೆಗಳು ನಿರಂತರವಾಗಿ ನಮ್ಮ ಸಮಾಜದಲ್ಲಿ ನಡೆಯುತ್ತಿವೆ. ಅದು ಅಭಿವೃದ್ಧಿಯ ಹೆಸರಿನಲ್ಲಾಗಿರಲಿ ಅಥವಾ ಹಣಗಳಿಸುವ ಉದ್ದೇಶ ದಿಂದಲೂ ಆಗಿರಬಹುದು. ಇಂದು ದೇಶದ ಹಲವಾರು ನೈಸರ್ಗಿಕ ತಾಣಗಳು ಕಣ್ಣೆದುರೇ ನಶಿಸಿ ಹೋಗುತ್ತಿದ್ದರೂ ನಾವು ಮೌನಿಗಳಾಗಿದ್ದೇವೆ. ಇಂದು ಹಲವಾರು ಪರಿಸರ ಸಂರಕ್ಷಣಾ ಸಂಘಟನೆಗಳು, ಹೋರಾಟಗಾರರು ಪರಿಸರಕ್ಕೆ ಮಾರಕವಾದ ಅನೇಕ ವಿಷಯುಗಳ ಬಗ್ಗೆ ಹೋರಾಟ ನಡೆಸುತ್ತಿದ್ದರಾದರೂ ಜನರ ಬೆಂಬಲ ಮತ್ತು ಪಾಲ್ಗೊಳ್ಳುವಿಕೆ ಇಲ್ಲದೆ ಅನೇಕ ಹೋರಾಟಗಳು ನೆಲಕ್ಕಚ್ಚಿವೆ. ಇದು ಹೀಗೇ ಮುಂದುವರೆದರೆ ಮುಂದಿನ ಪೀಳಿಗೆ ಅನೇಕ ಕಷ್ಟಗಳನ್ನು ಎದುರಿಸುವ ದಿನ ಬಹಳ ದೂರವಿಲ್ಲ.

ಕಾಡು, ಬೆಟ್ಟಗಳಿಗೆ ಚಾರಣ ಹೋಗುವುದೆಂದರೆ ಯಾರಿಗೆ ಇಷ್ಟ ಇಲ್ಲ ಹೇಳಿ, ಅತ್ಯಂತ ಸುಂದರವಾದ ಮರ, ಗಿಡ ಹಾಗೂ ಹೂವುಗಳನ್ನು ಹಾಗೂ ಅತ್ಯಂತ ಅಪರೂಪದ ಕೀಟಗಳು ಹಾಗೂ ಪ್ರಾಣಿಗಳನ್ನು ಕಂಡು ಆಸ್ವಾದಿಸುವ ನಮ್ಮ ಚಾರಣವು ಜೀವನದ ಮರೆಯಲಾಗದ ಕ್ಷಣಗಳೇ. ಹೀಗೆ ಚಾರಣ ಹೋಗುವ ನಮ್ಮ ಯುವ ಪೀಳಿಗೆ ಇಂದು ಹಲವಾರು ಕಾಡಿನ ಅಮೂಲ್ಯ ವಾದ ಅಪರೂಪದ ಜೀವ ವೈವಿಧ್ಯತೆಗೆ ಹಾನಿ ಮಾಡುವ ಮೂಲಕ ಕಾಡಿನ ನಾಶಕ್ಕೆ ಕಾರಣರಾಗುತ್ತಿದ್ದಾರೆ. ಮದ್ಯದ ಬಾಟಲಿಗಳನ್ನು ಕಾಡಿನಲ್ಲಿ ಎಸೆದು ಅನೇಕ ಪ್ರಾಣಿಗಳಿಗೆ ಹಾನಿಯುಂಟು ಮಾಡುತ್ತಿದ್ದಾರೆ. ಅಲ್ಲದೇ ಕ್ಯಾಂಪ್ ಫಯರ್ ಮೂಲಕ ರಾತ್ರಿ ಇಡೀ ಎಂಜಾಯ್ ಮಾಡಿ ಬೆಂಕಿಯನ್ನು ಸಂಪೂರ್ಣವಾಗಿ ನಂದಿಸದೇ ಕಾಡ್ಗಿಚ್ಚಿಗೆ ಕಾರಣರಾಗುತ್ತಿದ್ದಾರೆ. ಶಿಕಾರಿಯ ಮೂಲಕ ಮುಗ್ಧ ಪ್ರಾಣಿಗಳನ್ನೇ ಬಲಿ ಕೊಡುತ್ತಿರುವ ಪ್ರಕರಣಗಳು ನಿರಂತರವಾಗಿ ಬಿಟ್ಟಿದೆ. ಇದಲ್ಲದೇ 'ವನ್ಯಜೀವಿ ಛಾಯಾಚಿತ್ರ' ದ ಹೆಸರಿನಲ್ಲಿ ಬಹುಮಾನಕ್ಕಾಗಿ ಹಲವಾರು ಪಕ್ಷಿಗಳ ಮರಿಗಳನ್ನು ಗೂಡಿನಿಂದ ಹೊರ ತಂದು ಛಾಯಾಚಿತ್ರ ಕ್ಲಿಕ್ಕಿಸಿದ ಬಳಿಕ ಅವುಗಳನ್ನು ಅಲ್ಲೇ ಬಿಟ್ಟು ಬರುವ ಅನೇಕರು ನಮ್ಮ ಮಧ್ಯೆ ಇದ್ದಾರೆ. ಇವೆಲ್ಲವೂ ಹೀಗೇ ಮುಂದುವರೆದರೆ ನಮ್ಮ ನಡುವಿನ ಅಮೂಲ್ಯ ಜೀವ ಸಂಕುಲಗಳು ಒಂದೊಂದಾಗಿಯೇ ಕಣ್ಮರೆಯಾಗುವುದಂತೂ ಸತ್ಯ. ಇಂತಹ ಪ್ರಕರಣಗಳನ್ನು ತಡೆಗಟ್ಟಲು ನಮ್ಮನ್ನು ನಾವೇ ಸ್ವತಃ ತಿದ್ದಿಕೊಳ್ಳುವುದು ಒಳಿತು.

– ಇರ್ಫಾನ್ ನೆಕ್ಕಿಲಾಡಿ

ನೆನಪಿನ ಬುತ್ತಿ ತೆರೆಸುವ 'ಮಾವಿನ ಮಿಡಿ...'

ಯಾರಿಗಿಷ್ಟವಾಗದು ಹೇಳಿ ಎಳೆಯ ಹುಳಿಮಾವಿನ ಮಿಡಿ...? ಬಾಯಿ ಚಪ್ಪರಿಸಿಕೊಂಡು ತಿನ್ನಬೇಕೆನಿಸುವಷ್ಟು ಹುಳಿ, ವಿಭಿನ್ನ ಸ್ವಾದ ಹಾಗೂ ಪರಿಮಳ. ಜೊತೆಗೆ ಚಿಟಿಕೆ ಉಪ್ಪಿನೊಂದಿಗೆ ನೆಂಚಿಕೊಂಡು ತಿನ್ನುತ್ತಿದ್ದರೆ, ಆಹಾ!... ಎಂತಹ ಸವಿರುಚಿ. ಖಾರ ಇಷ್ಟ ಪಡುವವರಿಗಂತೂ ಉಪ್ಪು–ಹುಳಿ–ಖಾರ ಒಟ್ಟು ಸೇರಿಸಿದ ರಸದೂಟ. ಪುಟ್ಟ ಮಕ್ಕಳಿಂದ ಹಿಡಿದು ಹಣ್ಣು–ಹಣ್ಣು ಮುದುಕರ ತನಕ ಮಿಡಿ ಮಾವಿನಕಾಯಿಯನ್ನು ಇಷ್ಟಪಡದವ–ರಿಲ್ಲ. ಅದರಲ್ಲೂ ಚಿಕ್ಕ ಮಕ್ಕಳ ಬಗ್ಗೆ ಕೇಳಬೇಕೆಂದೇ ಇಲ್ಲ. ಇತರ ಮಕ್ಕಳ ಸೈನ್ಯದೊಂದಿಗೆ ಸೇರಿ, ಯಾರ್‍ಯಾರದೋ ತೋಟಕ್ಕೆ ನುಗ್ಗಿ ಮಿಡಿಯನ್ನು ಕಿತ್ತು ಜೊಲ್ಲು ಸುರಿಸಿಕೊಂಡು ಚಪ್ಪರಿಸಿಕೊಂಡು ತಿನ್ನುವ ಪರಿ ಮಿಡಿ ಮಾವಿನ ಅದ್ಭುತ ಸ್ವಾದಕ್ಕೆ ಹಿಡಿದ ಕೈಗನ್ನಡಿ.

ಶಿಶಿರ ಮತ್ತು ವಸಂತ ಋತುವಿನಲ್ಲಿ ಮಾವಿನ ಮರ ಚಿಗುರೊಡೆದು ಹೂಬಿಡುವ ಕಾಲ. ಮಾವು ಪ್ರಿಯರಿಗಂತೂ ಇದು ಪರ್ವಕಾಲ. ಮರದಲ್ಲಿನ ಹೂವುಗಳ ಅಲಂಕಾರವು ನಿಧಾನಕ್ಕೆ ಮಾವಿನ ಮಿಡಿಗಳಾಗಿ ಅನಾವರಣಗೊಳ್ಳುತ್ತದೆ. ಇದು ಬಹಳ ಮಹತ್ವದ ಘಟ್ಟವೂ ಹೌದು. ಈ ಸಮಯದಲ್ಲಿ ಹೆಚ್ಚು ಮಳೆಯಾಗುವಂತಿಲ್ಲ. ಅಂತೆಯೇ ಮೋಡಕಟ್ಟುವಂತೆಯೂ ಇಲ್ಲ. ಮೋಡವೇನಾದರೂ ಬಂದರೆ, ಅಧಿಕ ಮಾವಿನ ಮಿಡಿಯ ರುಚಿಯ ಮಹದಾಸೆಗೆ ಎಳ್ಳು–ನೀರು ಬಿಟ್ಟಂತೆಯೇ. ಕಾರಣ ಮೋಡ ನಿರಂತರವಾಗಿ ಬಂದರೆ ಮಾವಿನ ಹೂ ಮತ್ತು ಎಳೆಮಿಡಿ ಉದುರಿ ಹೋಗುವ ಸಾಧ್ಯತೆ ಹೆಚ್ಚು. ಅಧಿಕ ಮಳೆಯೂ ಬರದೆ ತುಸು ಮಳೆಯ ಸಿಂಚನವಾಗುತ್ತಿದ್ದರೆ ಮಿಡಿ ಮಾವಿನ ರುಚಿ ಸವಿಯಲು ಬಲು ಚೆಂದ.

ಮಾವಿನ ಮಿಡಿಗಳನ್ನು ಕೊಯ್ಯುವ ಸಂದರ್ಭವಂತೂ ಸಂಭ್ರಮದ ಉತ್ಸವವೇ ಸರಿ. ಬಂಧು–ಮಿತ್ರರೊಡನೆ ಸೇರಿ ಗೊಂಚಲು ಮಾವಿನ ಮಿಡಿಗಳನ್ನು ಕೊಯ್ದು ನಿಧಾನವಾಗಿ–ನಾಜೂಕಾಗಿ ಕೆಳಗಿಳಿಸಬೇಕಾಗುತ್ತದೆ. ಮಿಡಿಗಳಿಗೆ ಯಾವುದೇ ರೀತಿಯ ಪೆಟ್ಟಾಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಸಂದರ್ಭ ಕೆಲ ಮಾವಿನ ಮಿಡಿಗಳು, ನಿಧಾನವಾಗಿ ಚಪ್ಪರಿಸುತ್ತಾ ತಿಂದು ಹಲವರ ಹೊಟ್ಟೆ ಸೇರುವುದೂ ಉಂಟು. ಮಾವಿನಮಿಡಿಯ ಉಪ್ಪಿನಕಾಯಿಗೆ, ಹಲವು ಬಗೆಯ ಉಪ್ಪಿನಕಾಯಿಗಳಲ್ಲೇ ಅಗ್ರಪಟ್ಟ. ಮಿಡಿ ಉಪ್ಪಿನಕಾಯಿಯ ಅದ್ಭುತ ಸ್ವಾದವನ್ನು ಬೇರಾವುದಕ್ಕೂ ಹೋಲಿಸಲು ಸಾಧ್ಯವಿಲ್ಲ. ಅಂಬಟೆ, ನೆಲ್ಲಿಕಾಯಿ, ಲಿಂಬೆ ಇತರ ಯಾವುದೇ ಹಣ್ಣುಗಳ ಉಪ್ಪಿನಕಾಯಿಗಳೂ ಮಿಡಿ ಉಪ್ಪಿನಕಾಯಿಯೆದುರು ರುಚಿಹೀನ. ಹಾಗೆಂದು ಎಲ್ಲಾ ಬಗೆಯ ಮಾವಿನಕಾಯಿಯಿಂದ ಈ ವಿಶಿಷ್ಟ ಉಪ್ಪಿನಕಾಯಿ ತಯಾರಿಸಲು ಸಾಧ್ಯವಿಲ್ಲ. ಇದಕ್ಕೆ ಅದರದ್ದೇ ಆದ ವಿಭಿನ್ನ ಮಾವಿನ ತಳಿಗಳು ಬೇಕು. ಜೀರಿಗೆ ಮಿಡಿ, ಅಪ್ಪೆ ಮಿಡಿ, ಕಡಲೆ ಮಿಡಿ ಇವು ಮಿಡಿ ಉಪ್ಪಿನಕಾಯಿಗೆ ಬಳಕೆಯಾಗುವ ಪ್ರಮುಖ ಮಾವಿನ ತಳಿಗಳು. ಇದರಲ್ಲಿ ಸಣ್ಣ ಗಾತ್ರದ ಜೀರಿಗೆ ಮಿಡಿ ಹೆಚ್ಚು ಜನಪ್ರಿಯ. ಮಾರುಕಟ್ಟೆಗಳಲ್ಲಿ ಇದು ಕೊಂಚ ದುಬಾರಿಯೂ ಹೌದು. ಆದರೆ ಮಿಡಿ ಉಪ್ಪಿನಕಾಯಿ ಪ್ರಿಯರಿಗೆ ಈ ದುಬಾರಿ ಬೆಲೆಯೂ ಗಣನೆಗೆ ಬಾರದು.

ಮಿಡಿ ಮಾವಿನ ಉಪ್ಪಿನಕಾಯಿ ತಯಾರಿಸಲು ಎಲ್ಲರಿಂದಲೂ ಸಾಧ್ಯವಾಗದು. ಅದಕ್ಕೆ ಹೆಚ್ಚಿನ ಚಾಕಚಕ್ಯತೆ ಅಗತ್ಯ.ಹಂತಹಂತವಾಗಿ ಉಪ್ಪಿನಕಾಯಿ ತಯಾರಿಸಲು ಹೆಚ್ಚಿನ ಸಮಯ ಬೇಕು. ಶುಚಿತ್ವ ಮತ್ತು ಪರಿಶ್ರಮ ಅತ್ಯಗತ್ಯ. ಆದರೂ ಅದು ನೀಡುವ ಸ್ವಾದದ ಮುಂದೆ ಯಾವ ಪರಿಶ್ರಮವೂ ಲೆಕ್ಕಕ್ಕೆ ಬಾರದು. ಮನೆಯ ಹಿರಿ ಜೀವವಾದ ಅಜ್ಜಿ ತನ್ನ ಅನುಭವದಿಂದ ಮಾಡುವ ಉಪ್ಪಿನಕಾಯಿ ಅತ್ಯದ್ಭುತ ರುಚಿ ತರಿಸುತ್ತದೆ. ಮಿಡಿಯನ್ನು ಆರಿಸುವಾಗಲೂ ಹದವಾಗಿ ಬಲಿತ, ಗೊರಟು ಆಗಿರದ ಮಿಡಿಯನ್ನು ಆರಿಸಬೇಕಾಗುತ್ತದೆ. ಅದನ್ನು ಶುಚಿಗೊಳಿಸಿ ಸ್ವಲ್ಪ ಮಿಡಿ ಮತ್ತು ಸ್ವಲ್ಪ ಉಪ್ಪು ಈ ರೀತಿ ಒಂದೊಂದೇ ಪದರವಾಗಿ ಭರಣಿ ಅಥವಾ ಜಾಡಿಯಲ್ಲಿ ತುಂಬಿಸುತ್ತಾ ಹೋಗಬೇಕು. ಅದನ್ನು ಭದ್ರವಾಗಿ ಮುಚ್ಚಿಟ್ಟು ಒಂದೆರಡು ವಾರಗಳ ಕಾಲ ಉಪ್ಪು ಹೀರಿಕೊಳ್ಳಲು ಬಿಡಬೇಕಾಗುತ್ತದೆ. ಉಪ್ಪು ನೀರಿನಲ್ಲಿ ಕುಳಿತ ಮಿಡಿಗಳು ಉಪ್ಪು ನೀರಿನಲ್ಲಿ ಚಿರುಟಿ ಗಾತ್ರದಲ್ಲಿ ಚಿಕ್ಕದಾಗುತ್ತದೆ. ಬಳಿಕ ಅದರಿಂದ ಉಪ್ಪು ನೀರು ಮತ್ತು ಮಿಡಿಗಳನ್ನು ಪ್ರತ್ಯೇಕಿಸಿ, ಮಾವಿನ ಮಿಡಿಗಳನ್ನು ನೆರಳಿನಲ್ಲಿ ಶುಚಿಯಾದ ಬಟ್ಟೆಗಳ ಮೇಲೆ ಹಾಕಿ ಒಣಗಿಸಬೇಕಾಗುತ್ತದೆ. ಉಪ್ಪು ನೀರನ್ನು ಕುದಿಸಿ ಅದು ಆರಿದ ನಂತರ ಅದಕ್ಕೆ ಅಚ್ಚ ಮೆಣಸಿನ ಪುಡಿ, ಸಾಸಿವೆ ಪುಡಿ, ಜೀರಿಗೆ ಪುಡಿ, ಇಂಗು, ಅರಶಿನ ಪುಡಿ ಮತ್ತು ಸ್ವಲ್ಪ ಮೆಂತ್ಯೆ ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಅದಕ್ಕೆ ಮಾವಿನಮಿಡಿಗಳನ್ನು ಹಾಕಿ ಮಿಶ್ರಣ ಮಾಡಿದರೆ, ರುಚಿಕರ ಮಾವಿನ ಮಿಡಿ ಉಪ್ಪಿನಕಾಯಿ ಸಿದ್ಧವಾಗುತ್ತದೆ. ನಂತರ ಅದನ್ನು ಜಾಡಿಯಲ್ಲಿ ಹಾಕಿಟ್ಟು ಒಂದೆರಡು ವರ್ಷಗಳವರೆಗೆ ಇಟ್ಟರೂ ಕೆಡುವುದಿಲ್ಲ.

ಹೀಗೆ ತಯಾರಾದ ಉಪ್ಪಿನಕಾಯಿ ಮೊಸರನ್ನದ ಜೊತೆ ಬಾಯಿ ಚಪ್ಪರಿಸಿಕೊಂಡು ಸವಿದರೆ ಇನ್ನೂ ರುಚಿಯಾಗಿರುತ್ತದೆ. ಈ ಮಿಡಿ ಉಪ್ಪಿನಕಾಯಿಯಲ್ಲಿ ಔಷಧೀಯ ಗುಣಗಳೂ ಇವೆ ಎಂದು ಹಿರಿಯರು ಹೇಳುತ್ತಾರೆ. ಇದಕ್ಕೆ ಬೆರೆಸುವ ಇಂಗು, ಸಾಸಿವೆ, ಅರಶಿನ ಮೊದಲಾದ ಪದಾರ್ಥಗಳಲ್ಲಿ ರೋಗನಿವಾರಕ ಗುಣಗಳಿವೆ.ಮಿಡಿಯ ಸೊನೆಯ ಪರಿಮಳವು ನೆಗಡಿಯನ್ನು ದೂರ ಮಾಡುತ್ತದೆ ಎನ್ನಲಾಗಿದೆ.

ಒಟ್ಟಾರೆ ಬಾಯಿಯಲ್ಲಿ ನೀರೂರಿಸುವ ಮಿಡಿ ಮಾವಿನ ರುಚಿಗೆ ಮರುಳಾಗದವರು ಬಲು ವಿರಳ. ಮಿಡಿಮಾವಿನ ಹೋಳುಗಳನ್ನು ಉಪ್ಪು–ಖಾರದ ಜೊತೆ ನೆಂಚಿಕೊಂಡು ತಿನ್ನದವರು ಇರಲಿಕ್ಕಿಲ್ಲ. ಅಜ್ಜಿ– ಅಮ್ಮ ಮಾಡುವ ಮಿಡಿ ಉಪ್ಪಿನಕಾಯಿಯ ರುಚಿಯನ್ನು ಯಾವ ಮೃಷ್ಟಾನ್ನ ಭೋಜನದಿಂದಲೂ ಮೀರಿಸಲು ಸಾಧ್ಯವಿಲ್ಲ. ಅಂತೂ ಮಾವಿನ ಮಿಡಿಯ ಹಲವು ವಿಚಾರಗಳು ಸುಂದರವಾದ ಬಾಲ್ಯದ ತುಂಟಾಟದ ನೆನಪುಗಳನ್ನು ಮೆಲುಕು ಹಾಕಿಸುವುದಂತೂ ಸುಳ್ಳಲ್ಲ......

– ಜಯರಾಜ್

ಪರಾಗಸ್ಪರ್ಶದಲ್ಲಿ ಜೇನುಕೃಷಿಯ ಸವಿ

ಗಿಡ ನೆಟ್ಟು ಬೆಳೆಸಿ ಫಸಲು ಪಡೆಯುವುದೊಂದೇ ಕೃಷಿಯಲ್ಲ. ಜಾನುವಾರು, ಕೀಟಗಳಿಂದಲೂ ಉತ್ತಮ ಕೃಷಿಕನೆನಿಸಿಕೊಳ್ಳಬಹುದು. ಹಾಗೆ ಜೇನು ನೊಣಗಳಿಂದ ಪರೋಕ್ಷವಾಗಿಯೂ ಪ್ರತ್ಯಕ್ಷವಾಗಿಯೂ ಲಾಭ ಪಡೆಯುತ್ತಿರುವವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ನರಿಮೊಗರು ಸಮೀಪದ ಕೃಷಿಕ ಕಿರಣ್. ಇವರು ಓದಿದ್ದು ಮೆಕಾನಿಕ್ ಡಿಪ್ಲೊಮ ಆದರೆ ಅನುಸರಿಸಿದ್ದು ಕೃಷಿಯನ್ನು. ತಮ್ಮ ಚಿಕ್ಕಪ್ಪನ ಪ್ರೇರಣೆಯಿಂದ ಅಡಿಕೆಯ ಪರಾಗಕ್ಕೋಸ್ಕರ ಜೇನುಕೃಷಿಕ ಹರೀಶ್ ಕೋಡ್ಲರ ಜೇನು ಕೃಷಿಯನ್ನು ನೋಡಿ, ಅನುಭವ ಪಡೆದುಕೊಂಡು ತಾವೇ ಸ್ವತಃ ಒಂದು ಜೇನುಪೆಟ್ಟಿಗೆಯನ್ನು ಇಡುವುದರ ಮೂಲಕ ಜೇನು ಕೃಷಿಯನ್ನು ಪ್ರಾರಂಭಿಸಿದರು.

ಹೀಗೆ 2007 ರಲ್ಲಿ ಒಂದು ಪೆಟ್ಟಿಗೆಯಿಂದ ಪ್ರಾರಂಭಿಸಿದ ಜೇನು ಕೃಷಿಕ ಕಿರಣ್ 39 ಜೇನುಕುಟುಂಬಗಳ ಒಡೆಯರಾಗಿದ್ದಾರೆ. ಇವರು ಜೇನು ಪೆಟ್ಟಿಗೆಗಳನ್ನು ಇಟ್ಟಿರುವ ಉದ್ದೇಶ ಒಂದೇ ಪರಾಗಸ್ಪರ್ಶದಿಂದ ಅಡಿಕೆ ಇಳುವರಿ ಹೆಚ್ಚಾಗಬೇಕು ಎಂಬುದು. ಜೊತೆಗೆ ಇವರು ಈ ಪ್ರಯೋಗದಲ್ಲಿ ಸಫಲತೆಯನ್ನು ಕಂಡಿರುವುದು ಸತ್ಯ. ನಾಲ್ಕು ಜೇನು ಪೆಟ್ಟಿಗೆಯಿಂದ ಒಂದು ಕಂಡಿ ಅಡಿಕೆ ಹೆಚ್ಚಾಗುತ್ತದೆ ಎಂದು ಇವರು ಸ್ವಂತ ಅನುಭವದಿಂದ ಹೇಳುತ್ತಾರೆ.

ಜೇನುಕುಟುಂಬವನ್ನು ಇರಿಸಿದ 8–9 ನೇ ದಿವಸದಲ್ಲಿ ಮೇಣದ ಎಲೆಯ ಕೆಳಭಾಗದಲ್ಲಿ ರಾಣಿಸೆಲ್‌ಗಳು ಸೃಷ್ಟಿಯಾಗಿರುತ್ತವೆ. ಅವುಗಳಲ್ಲಿ

ಬ್ರೌನ್ ಬಣ್ಣಕ್ಕೆ ಬಂದಿರುವ ಸೆಲ್‌ಗಳು ಒಳ್ಳೆಯದಾಗಿದ್ದು ಅವುಗಳನ್ನು 'ವಿ' ಆಕಾರದಲ್ಲಿ ತುಂಡರಿಸಿ ಇನ್ನೊಂದು ಪೆಟ್ಟಿಗೆಯ ಎರಡು ಫ್ರೇಮ್‌ಗಳ ಎಡೆಯಲ್ಲಿಡಬೇಕು. ಇದರಿಂದ ಹೊಸ ಕುಟುಂಬವೊಂದು ನಿರ್ಮಾಣವಾಗುತ್ತದೆ. ಗಂಡು ಹುಳುಗಳು ಸಂತಾನೋತ್ಪತ್ತಿಗಾಗಿ ಮಾತ್ರ ಉಪಯೋಗವಿರುವುದರಿಂದ ಹೆಣ್ಣು ಹುಳುಗಳು ಜೇನು ಸಂಗ್ರಹಣೆ ಕಾರ್ಯದಲ್ಲಿ ನಿರತವಾಗಿರುತ್ತವೆ. ಗಂಡು ಹುಳುಗಳು ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಗಂಡು ಹುಳದ ಮೊಟ್ಟೆಗಳನ್ನು ಲಾರ್ವಾ ಸ್ಥಿತಿಯಲ್ಲೇ ಕೊಲ್ಲುವ ಕೆಲಸವನ್ನು ಮಾಡಬೇಕು. ಪೆಟ್ಟಿಗೆ ಇಟ್ಟ ಹತ್ತು ದಿನಗಳಲ್ಲಿ ಜೇನುತುಪ್ಪ ತೆಗಿಯಬಹುದು. ಮೇಣದ ಎಲೆಗೆ ಯಾವುದೇ ರೀತಿಯ ಪೆಟ್ಟಾಗದಂತೆ ಜೇನು ತುಪ್ಪ ತೆಗೆದು ಮತ್ತೆ ಅದೇ ಫ್ರೇಮನ್ನು ಇಟ್ಟರೆ ನೊಣಗಳಿಗೆ ಎದಿ ಕಟ್ಟುವ ಕೆಲಸವಿಲ್ಲದೆ ತುಪ್ಪ ತುಂಬಿಸುವ ಕೆಲಸ ಮಾತ್ರವಿರುವುದರಿಂದ ಬೇಗ ತುಪ್ಪ ಪಡೆಯಲು ಸಾಧ್ಯವಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಸೂಕ್ಷ್ಮದಿಂದ, ನೊಣಗಳಿಗೆ ಪೆಟ್ಟಾಗದಂತೆ ನಿರ್ವಹಿಸಬೇಕು ಎನ್ನುತ್ತಾರೆ ಕೃಷಿಕ ಕಿರಣ್.

ಪೆಟ್ಟಿಗೆಯನ್ನು ಇರುವೆಗಳಿಂದ ರಕ್ಷಿಸಲು ನೆಲದಿಂದ ಮೇಲೆ ಇಡಬೇಕಾದ್ದರಿಂದ ತಾವೇ ಕಬ್ಬಿಣದ ಸರಳಿನಲ್ಲಿ ಸ್ಟ್ಯಾಂಡ್ ತಯಾರಿಸಿ, ಸ್ಟ್ಯಾಂಡ್‌ನ ಕೆಳಭಾಗಕ್ಕೆ ಎಂಡ್‌ಕ್ಯಾಪ್‌ನ್ನು ತೂತು ಮಾಡಿ ಸರಳಿಗೆ ವೆಲ್ಡ್ ಮಾಡಿ ಅದರಲ್ಲಿ ನೀರು ಹಾಕಿಡುವಂತೆ ಮಾಡಿದ್ದಾರೆ. ಸರಳನ್ನು ಒಂದು ಅಡಿ ಮಣ್ಣಿನ ಒಳಗೂ ಎರಡು ಅಡಿ ಮಣ್ಣಿನ ಮೇಲ್ಭಾಗಕ್ಕೂ ಇರುವಂತೆ ಹೂತಿಡುತ್ತಾರೆ. ಸ್ವತಃ ಇವರೇ ಫ್ರೇಮ್‌ಗಳನ್ನು ತಯಾರಿಸುತ್ತಾರೆ. ಜೇನು ತೆಗೆಯುವಾಗ ನೊಣಗಳು ಕಚ್ಚಲು ಬಾರದಂತೆ ಸ್ಮೋಕರ್ ಎಂಬ ಸಾಧನದಿಂದ ಹೊಗೆ ಹಾಕುತ್ತಾರೆ. ಮತ್ತು ಹೆಚ್ಚಿನ ಭದ್ರತೆಗಾಗಿ ಸ್ವತಃ ಇವರೇ ಅಭಿವೃದ್ಧಿಗೊಳಿಸಿದ ಮುಖಕವಚವನ್ನೂ ಉಪಯೋಗಿಸುತ್ತಾರೆ. ಒಂದು ಪೆಟ್ಟಿಗೆಯಲ್ಲಿ ಎರಡು ಕುಟುಂಬಗಳನ್ನು ಇರಿಸುವ ಪ್ರಯತ್ನದಲ್ಲಿ ಇವರಿದ್ದಾರೆ.

ಮರದ ಪೊಟರೆಗಳಿಂದ ಹಿಡಿದ ಮೊಜಂಟಿ, ಕಪ್ಪು, ಹಳದಿ, ಜೇನುಕುಟುಂಬಗಳ ಜೊತೆಗೆ ಇವರ ಬಳಿ 'ಮಲ್ಲಿಫೆರಾ' ಎಂಬ ಜಾತಿಯ ಜೇನು ನೊಣಗಳಿವೆ. ಸಾಮಾನ್ಯವಾಗಿ ಜೇನುನೊಣಗಳು 'ಥಾಯಿಸಾರ್‌ಬ್ರೋಡ್' ಎಂಬ ರೋಗಕ್ಕೆ ತುತ್ತಾಗುತ್ತವೆ. ಇದನ್ನು ತಡೆಗಟ್ಟಲು, ನೊಣಗಳಿಗೆ ಪ್ರತಿರೋಧಕ ಶಕ್ತಿ ಹೆಚ್ಚಲು 'ಜೆವಿರ್‍ಯಾಕ್ಸ್' ಎಂಬ ಔಷಧಿಯನ್ನು ನೀಡುತ್ತಾರೆ. ಜೇನುನೊಣ ಕಡಿದಾಗ ಅದರ ಮುಳ್ಳನ್ನು (ಆಣಿ) ಮೇಣದ ಹಾಳೆಯ ಮುಚ್ಚಳವನ್ನು ತೆಗೆಯುವ ಕತ್ತಿಯಿಂದ ತೆಗಯಬೇಕು. ನಂತರ ನೀರುಳ್ಳಿ ಕತ್ತರಿಸಿ ಅದ–ರಿಂದ ಕಡಿದ ಜಾಗವನ್ನು ಚೆನ್ನಾಗಿ ಉಜ್ಜುವುದರಿಂದ ನಂಜಿನ ಅಂಶವನ್ನು ಕಡಿಮೆಗೊಳಿಸಬಹುದು ಎಂಬುದು ಇವರ ಔಷಧೀಯ ಮಾಹಿತಿ.

ಒಂದು ಗೂಡಿನಲ್ಲಿ 39 ಕ್ವೀನ್ ಸೆಲ್‌ಗಳು ಈ ಹಿಂದೆ ಬಂದಿದ್ದದ್ದು ದಾಖಲೆಯಾಗಿತ್ತು. ಆದರೆ ಈ ವರ್ಷ ಇವರ ತೋಟದಲ್ಲಿ 45 ಕ್ವೀನ್‌ಸೆಲ್‌ಗಳು ಕಂಡುಬಂದಿರುವುದು ಹಿಂದಿನ ದಾಖಲೆಯನ್ನು ಮುರಿದಿದೆ ಎನ್ನುತ್ತಾರೆ ಇವರು.

ದೊಡ್ಡದು, ಸಣ್ಣದು ಎಂಬ ಎರಡು ವಿಧದ ಪೆಟ್ಟಿಗೆಗಳನ್ನು ಕುಟುಂಬ ಸಮೇತವಾಗಿ ಮಾರಾಟ ಮಾಡುತ್ತಾರೆ. ಜೇನು ಕೃಷಿ ಮಾಡುತ್ತೇವೆ ಎನ್ನುವವ–ರಿಗೆ ಪೂರ್ಣ ಮಾಹಿತಿಯನ್ನು ನೀಡುತ್ತೇನೆ ಎನ್ನುವ ಆಸಕ್ತಿ ಇವರಲ್ಲಿದೆ. ಇವರು ಒಂದು ವರ್ಷದಲ್ಲಿ ಒಂದು ಪೆಟ್ಟಿಗೆಯಿಂದ 10 ಕೆ.ಜಿ. ತುಪ್ಪ ತೆಗೆಯಬಹುದು. ಜೇನುಕೃಷಿಯಿಂದ ತುಪ್ಪವೊಂದೇ ಲಾಭವಲ್ಲ, ಮೇಣಕ್ಕೂ ಬೇಡಿಕೆಯಿದೆ. ಹೆಚ್ಚು ಬಂಡವಾಳವಿಲ್ಲದೆ ಲಾಭ ಪಡೆಯಬಹುದಾದ ಕೃಷಿಗಳಲ್ಲಿ ಇದು ಕೂಡ ಒಂದು ಎಂದು ಹೆಮ್ಮೆಯಿಂದ ಹೇಳುತ್ತಾರೆ.

–ಮೇಘಲಕ್ಷ್ಮಿ ಮರುವಾಳ

ಅನ್ವಯಿಕ ಪ್ರಾಣಿಶಾಸ್ತ್ರ ಕಾರ್ಯಾಗಾರ

(ಒಂದನೇ ಪುಟದಿಂದ...)

ಆಧುನಿಕತೆಯಿಂದಾಗಿ ಇಂದು ಅನೇಕ ಆಹಾರಗಳು ಮತ್ತು ಆಹಾರ ಕ್ರಮ ವಿಷಮಯವಾಗಿದ್ದು; ಅವುಗಳೇ ಕ್ಯಾನ್ಸರ್‌ಗೆ ಸಹಿತ ಹಲವು ರೋಗಗಳಿಗೆ ಕಾರಣವಾಗಿದೆ. ಅವುಗಳಲ್ಲಿರುವ ಕೆಲವು ವಿಷಕಾರಿ ಅಂಶಗಳು ಡಿಎನ್‌ಎಯನ್ನು ಹಾನಿಗೊಳಿಸಿ ಜೀವಕೋಶಗಳನ್ನು ಕ್ಯಾನ್ಸರ್ ಕೋಶಗಳಾಗಿ ಪರಿವರ್ತಿಸುತ್ತವೆ. ಇದು ಮುಂದೆ ತೀವ್ರ ಅನಾರೋಗ್ಯಕ್ಕೆ ಕಾರಣವಾಗುತ್ತದೆ.ಸೂಕ್ಷ್ಮ ಪೋಷಕಾಂಶಗಳು ಅಧಿಕವಿರುವ ನಾರುಯುಕ್ತ ಆಹಾರವನ್ನು ಹೆಚ್ಚು ತಿಂ–ದರೆ ಇದರಿಂದ ದೂರವಿರಬಹುದು, ಹಾಗೂ ಆರೋಗ್ಯದತ್ತ ಹೆಚ್ಚು ಗಮನಹರಿಸುವುದು ಅತ್ಯಗತ್ಯ ಎಂದು ಹೇಳಿದರು.

ಸಿಂಗಾಪುರ್‌ನ ಹೆಲ್ತ್ ಆಂಡ್ ಅಲೆಕ್ಸಾಂಡ್ರಾ ಹಾಸ್ಪಿಟಲ್‌ನ ಡಾ.ರಾಜರಾಮ ನಿಖಮ್ ಭಾಸ್ಕರ್, ವೆಲ್ಲೂರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ವಿಐಟಿ)ವಿ.ವಿಯ ಡಾ.ರಾಧಾ ಸರಸ್ವತಿ, ಡಾ.ಮುರಳೀಧರ್ ಹೆಗ್ಡೆ, ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗದ ಪ್ರೊ.ಕೆ.ಎಸ್. ಶ್ರೀಪಾದ ಭಾಗವಹಿಸಿದ್ದರು.

ಭಾರತೀಯರು ಅಂತರ್ಜಾಲ ರೇಡಿಯೋ ಕೇಳುವ ಸಂಪ್ರದಾಯವನ್ನು ರೂಢಿಸಿಕೊಳ್ಳಬೇಕು:ಸುಗತ ಶ್ರೀನಿವಾಸರಾಜು.

ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೋದ್ಯಮವೆರಡರಲ್ಲೂ ಸೇವೆ ಸಲ್ಲಿಸುತ್ತಿರುವ ಅನುಭವೀ ಪತ್ರಕರ್ತ ಶ್ರೀ. ಸುಗತ ಶ್ರೀನಿವಾಸರಾಜು. ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳೆರಡರಲ್ಲೂ ಸೇವೆ ಸಲ್ಲಿಸಿರುವ ಇವರು ಅದ್ಭುತ ಬರಹಗಾರರೂ ಹೌದು. ವಿಷಿಯಾನೆಟ್ ನ್ಯೂಸ್ ನೆಟ್‌ವರ್ಕ್ ಪ್ರೈ ಲಿ(ಎಎನ್‌ಪಿಎಲ್) , ವಿಜಯ ಕರ್ನಾಟಕದ ಸಂಪಾದಕರಾಗಿ ಸೇವೆ ಸಲ್ಲಿಸಿರುವ ಇವರು, ಟೈಮ್ಸ್ ಗ್ರೂಪ್, ಔಟ್‌ಲುಕ್, ಹಿಂದೂಸ್ತಾನ್ ಟೈಮ್ಸ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪತ್ರಿಕೋದ್ಯಮದ ಛಾಪನ್ನು ಹರಡಿಸಿದ್ದಾರೆ. ಮಂಗಳೂರು ವಿವಿಯ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗದ ಅಡ್ಜಂಕ್ಟ್ ಪ್ರೊಫೆಸರ್ ಆಗಿದ್ದಾರೆ. ಇವರು ಹೊಸತಾಗಿ ಆರಂಭಿಸಲಾಗಿರುವ 'ಸುನೋಹ್‌ಸ್ಕ್ಯಾಪ್ ರೇಡಿಯೋ ಫೌಂಡೇಶನ್'ನ ಸಹ ಸಂಸ್ಥಾಪಕ ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸಂರ್ಶನದ ತುಣುಕುಗಳು ಇಲ್ಲಿವೆ.

ಬಹುಶಃ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಅಂತರ್ಜಾಲವನ್ನು ಬಳಸಿಕೊಂಡು ಹೊಸತಾಗಿ ಒಂದು ರೇಡಿಯೋ ಬ್ರಾಡ್‌ಕಾಸ್ಟಿಂಗ್‌ಅನ್ನು ಆರಂಭ ಮಾಡಿದ್ದೀರಿ, ಈ ಬಗ್ಗೆ ಏನು ಹೇಳುತ್ತೀರಿ?

ಹೌದು, ಸಾಮಾನ್ಯ ರೇಡಿಯೋ ಬ್ರಾಡ್ಕಾಸ್ಟಿಂಗ್ ರೀತಿಯಲ್ಲೇ ಇದು ಕೂಡಾ ಬ್ರಾಡ್‌ಕಾಸ್ಟಿಂಗ್. ಇಲ್ಲಿ ಅಂತರ್ಜಾಲವನ್ನು ಬಳಸಿ ಧ್ವನಿಯನ್ನು ಬ್ರಾಡ್‌ಕಾಸ್ಟ್ ಮಾಡಲಾಗುತ್ತದೆ. ಕೇವಲ ಬ್ರಾಡ್‌ಕಾಸ್ಟ್ ಶೋಗಳನ್ನಷ್ಟೇ ಅಲ್ಲದೇ ಕೆಲವೊಂದು ಆರ್ಕೈವ್‌ಗಳನ್ನು ನಿರ್ಮಿಸಲಾಗುತ್ತದೆ. ವಿಶ್ವಾದ್ಯಂತ ಇರುವ ಬ್ರಾಡ್‌ಕಾಸ್ಟ್ ಶೋಗಳಲ್ಲಿ ಕೆಲವೊಂದು ಆಯ್ದ ಹಾಗೂ ನಮ್ಮ ಕೇಳುಗ–ರಿಗೊಪ್ಪುವ ಪ್ರಮುಖ ಆಡಿಯೋ ಕ್ಲಿಪ್‌ಗಳನ್ನು ಬ್ರಾಡ್‌ಕಾಸ್ಟ್ ಮಾಡುತ್ತೇವೆ.

ಈ ಬ್ರಾಡ್‌ಕಾಸ್ಟಿಂಗ್ ವ್ಯವಸ್ಥೆಯಲ್ಲಿ ಸುದ್ದಿಯಾಧಾರಿತ ಕಾರ್ಯಕ್ರಮಗಳನ್ನು ಮಾತ್ರ ಪ್ರಸಾರ ಮಾಡಲಾಗುವುದೇ?

ಇಲ್ಲ, ಕೇವಲ ಸುದ್ದಿಯಾಧಾರಿತ ಕಾರ್ಯಕ್ರಮಗಳಷ್ಟೇ ಅಲ್ಲ. ವಿವಿಧ ದೃಷ್ಟಿಕೋನಗಳ ಕಾರ್ಯಕ್ರಮಗಳು ಇರುತ್ತದೆ. ಹೆಚ್ಚಿನ ಎಲ್ಲಾ ಕಾರ್ಯಕ್ರಮಗಳು ಮುಂಚಿತವಾಗಿ ಧ್ವನಿಮುದ್ರಣವಾಗಿರುವಂತಹದ್ದೇ. ಮುಂದೆ ತಂತ್ರಜ್ಞಾನದ ಅಭಿವೃದ್ಧಿ ಆದ ಹಾಗೇ ಮತ್ತಷ್ಟು ಬದಲಾವಣೆಗಳನ್ನು ಮಾಡಬಹುದಾಗಿದೆ.

ಅಂತರ್ಜಾಲ ರೇಡಿಯೋವನ್ನು ಆಲಿಸಬೇಕಾದರೆ ಪ್ರತ್ಯೇಕ ಸಮಯವೇನಾದರೂ ಇದೆಯೇ?

ಇಲ್ಲ, ಇದು ಆನ್ ಡಿಮಾಂಡೆಡ್. ಯಾವಾಗೆಲ್ಲಾ ಆಲಿಸಬೇಕೆನಿಸುವುದೋ ಆವಾಗ ಆಲಿಸಬಹುದು.

ಭಾರತದಲ್ಲಿ ಈ ಪ್ರಯತ್ನಕ್ಕೆ ಎಂತಹ ಭವಿಷ್ಯವಿದೆ?

ಅಮೆರಿಕಾದಲ್ಲಿ ಇದು ಬಹಳ ಯಶಸ್ವಿಯಾಗಿದೆ. ಭಾರತದಲ್ಲೂ ಜನರು ಕೇಳುವ ಸಂಪ್ರದಾಯವನ್ನು ರೂಢಿಸಿಕೊಂಡರೆ ಖಂಡಿತಾ

ಯಶಸ್ವಿಯಾಗುತ್ತದೆ. ನಿಧಾನವಾಗಿ ಈ ಪ್ರಕ್ರಿಯೆ ಆದರೂ ಉತ್ತಮವೇ.

ಇಂಗ್ಲಿಷ್‌ನ ನಿಯತಕಾಲಿಕೆಗೆ ಹೋಲಿಸಿದರೆ ಕನ್ನಡದಲ್ಲಿ ಅಂತಹ ಗುಣಮಟ್ಟದ ನಿಯತಕಾಲಿಕೆ ಅಥವಾ ಪತ್ರಿಕೆ ಇಲ್ಲ ಎಂದು ಹೇಳಬಹುದು. ಈ ಬಗ್ಗೆ ನಿಮ್ಮ ಅನಿಸಿಕೆ ಏನು?

ಉತ್ತಮ ಪ್ರಶ್ನೆ. 2000ದ ಇಸವಿಯವರೆಗೆ ಲಂಕೇಶ್ ಪತ್ರಿಕೆ ಮತ್ತು ಇತರ ಸಾಹಿತ್ಯಿಕ ಪತ್ರಿಕೆಗಳ ಉತ್ತಮ ಪ್ರಭೆ ಇತ್ತು. ಆಂತಹ ಪತ್ರಿಕೆಗಳ ಅಂತ್ಯವಾಯಿತು. ವಿವಿಧ ಪತ್ರಿಕೆಗಳು ಗ್ರಾಹಕರನ್ನು ಸೆಳೆಯಲು ವಿಭಿನ್ನ ಪ್ರಯತ್ನ ಮಾಡಿತು. ಪತ್ರಿಕೆ ತನ್ನತನವನ್ನು ಉಳಸಿಕೊಳ್ಳಲು ನಲುಗಾಡಿತು.ಕನ್ನಡ ಪತ್ರಿಕೆಯಲ್ಲಿ ಆ ಗುಣಮಟ್ಟ ಕೊರತೆ ನಿಮಗೆ ಅರಿವಾಗುತ್ತಿದೆ.ಅದು ನಿಜಕ್ಕೂ ಸತ್ಯ ಜನಪರ ಎಂಬ ನಿಲುವೆ ಪಂಥೀಯವಾದವಾಗಿ ಬದಲಾಗಬಾರದು.ಕ್ರಮೇಣ ಇದು ಸರಿಹೋಗುತ್ತದೆ.

ಸಂದರ್ಶನ

ಇತ್ತೀಚೆಗೆ ಪತ್ರಿಕೋದ್ಯಮ ವಾಣಿಜ್ಯೋದ್ಯಮವಾಗಿ ಬದಲಾಗಿಬಿಟ್ಟಿದೆ ಎಂಬ ಆರೋಪವಿದೆ, ಇದಕ್ಕೆ ತಮ್ಮ ಪ್ರತಿಕ್ರಿಯೆ ಏನು?

ಹೌದು, ವಾಣಿಜ್ಯೋದ್ಯಮವಾಗಿ ಖಂಡಿತ ಬದಲಾಗಿದೆ. ಪತ್ರಕರ್ತರ ವ್ಯವಸಾಯ ಒಂದು ಪತ್ರಿಕೋದ್ಯೋಗ ಅಷ್ಟೇ. ಪತ್ರಿಕೆಯ ಮಾಲೀಕನಿಗೆ ಅದು ಪತ್ರಿಕೋದ್ಯಮ.ಏಕೆಂದರೆ ಪತ್ರಿಕೆಯನ್ನು ನಡೆಸುವುದು ಸುಲಭದ ಕೆಲಸವಲ್ಲ. ಸಾಕಷ್ಟು ಹಣ ವ್ಯಯವಾಗುತ್ತದೆ. ಹೀಗಾಗಿ ಅದು ವಾಣಿಜ್ಯೋದ್ಯಮವೇ ಹೌದಾಗಿದೆ.

ಪತ್ರಿಕೆಯಲ್ಲಿ ಸಂಪಾದಕನಾಗಿರುವವನನ್ನು ಪತ್ರಿಕೆಯ ನಿರ್ವಹಣೆಗೋಸ್ಕರ ಇರುವ ವ್ಯಕ್ತಿಯಾಗಿ ಆತನನ್ನು ನೋಡಲಾಗುತ್ತದೆ. ಸಂಪಾದಕ ಇಲ್ಲದೆಯೂ ಪತ್ರಿಕೆ ನಡೆಸಬಹುದು ಎನ್ನುವಂತಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಹೌದು, ಸತ್ಯ ಅದು. ಅಂತಹ ವಿಚಾರಗಳಲ್ಲಿ ಮಾಲೀಕರ–ಜೊತೆಗೆ ರಾಜಿಯಾಗಲು ಸಾಧ್ಯವಾಗದೆ ಪತ್ರಿಕೆಯಿಂದ ನನ್ನಂತಹ ಪತ್ರಕರ್ತರು ಹೊರಬರುತ್ತಾರೆ. ಅಂತಹ ವಾತಾವರಣದಲ್ಲಿ ಇರುವ ಅಥವಾ ಸಂಪಾದಕರಾಗಿ ದುಡಿಯುವ ಅಗತ್ಯ ಇಲ್ಲ. ನನ್ನ 19 ವರ್ಷದ ಸಂಪಾದಕೀಯ ಅನುಭವದಲ್ಲಿ ನಾನೆಲ್ಲೂ ರಾಜಿಯಾಗಿಲ್ಲ. ಹಾಗಾಗಿ ತುಂಬಾ ಪತ್ರಿಕೆಗಳಲ್ಲಿ ಕೆಲಸ ಮಾಡುವಂತಾಯ್ತು.

ಪತ್ರಿಕೋದ್ಯಮ ತತ್ವಗಳು ಮಾಧ್ಯಮಗಳಲ್ಲಿ ಅನುಸರಣೆಯಾಗುತ್ತಿದೆಯೇ?

ರಾಜಕೀಯದಲ್ಲಿ ಹೇಗೆ ಅದಕ್ಕಿರುವ ತತ್ವಗಳು ಅನುಸರಣೆಯಾಗುತ್ತಿಲ್ಲವೋ, ಪತ್ರಿಕೋದ್ಯಮದಲ್ಲೂ ಹಾಗೆಯೇ ಆಗಿದೆ ಇವೆಲ್ಲವೂ ಸಂಪಾದಕನ ಮೇಲೆ ಅವಲಂಬಿತವಾಗಿದೆ. ಸಂಸ್ಥೆ ಅಥವಾ ಸಂಘಟನೆಯ ಮುಖ್ಯಸ್ಥ ಸರಿಯಿರಬೇಕು.

ಯುವ ಜನತೆಯ ಬರವಣಿಗೆಯಲ್ಲಿ ಭಾಷೆ ಮತ್ತು ಸಾಮಾನ್ಯ ಜ್ಞಾನದ ಕೊರತೆ ಕಾಣಿಸುತ್ತಿದೆ ಎಂದು ತಮಗನಿಸುತ್ತದೆಯೇ?

ಭಾಷೆ, ಸಾಹಿತ್ಯಕ್ಕಿಂತ ಒಂದು ವಿಷಯವನ್ನು ಎಷ್ಟು ಅರ್ಥೈಸಿಕೊಳ್ಳುತ್ತೀರಿ, ಅದಕ್ಕೊಪ್ಪುವಂತೆ ಹೇಗೆ ಬರೆಯುತ್ತೀರಿ, ಹೊಸ ಅಂಶವನ್ನು ಸರಳವಾಗಿ ಹೇಗೆ ಹೇಳುತ್ತೀರಿ ಎಂಬುವುದು ಮುಖ್ಯವಾಗುತ್ತದೆ.

ತಾವು ಇಂಗ್ಲಿಷ್ ವಿಷಯದಲ್ಲಿ ಎಂಎ ಪದವಿಯನ್ನು ಪಡೆದು ಪತ್ರಿಕೋದ್ಯಮದತ್ತ ಹೇಗೆ ಮುಖ ಮಾಡಿದಿರಿ? ಈ ಕ್ಷೇತ್ರದಲ್ಲಿ ನಿಮಗೆ ಆತ್ಮತೃಪ್ತಿಯಿದೆಯೇ?

ಇದು ಆಕಸ್ಮಿಕವಷ್ಟೇ. ನಾನು ಪತ್ರಿಕೋದ್ಯಮ ಓದಿದವನಲ್ಲ. ಖಂಡಿತವಾಗಿಯೂ ಈ ಕ್ಷೇತ್ರದಲ್ಲಿ ನನಗೆ ತೃಪ್ತಿ ಇದೆ. ಇಲ್ಲಿ ಸಾಕಷ್ಟು ಸವಾಲುಗಳೂ ಇವೆ. ಅವುಗಳನ್ನು ಎದುರಿಸುವುದೇ ಇಲ್ಲಿ ತುಂಬಾ ಮುಖ್ಯವಾಗುತ್ತದೆ. ಹೀಗಾಗಿ ನನಗೆ ಆತ್ಮತೃಪ್ತಿಯಂತೂ ಇದೆ.

ಯುವ ಪತ್ರಕರ್ತರಿಗೆ ಏನು ಕಿವಿಮಾತನ್ನು ಹೇಳಲು ಇಚ್ಛಿಸುತ್ತೀರಿ?

ನೀವು ಎಲ್ಲೇ ಪತ್ರಕರ್ತರಾಗಿ ಸೇರಿಕೊಂಡರೂ ನಿಮಗೆ ವಹಿಸಿದ ನಿಮ್ಮ ಕೆಲಸನ್ನು ಅಚ್ಚುಕಟ್ಟಾಗಿ ಮಾಡಿ. ವೃತ್ತಿಪರತೆಯನ್ನು ಕಾಪಾಡಿ. ನಿಧಾನವಾಗಿ ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ನಿಮ್ಮ ದಾರಿಯನ್ನು ಗಟ್ಟಿ ಮಾಡಿಕೊಳ್ಳಿ. ಅನಗತ್ಯ ಮಾತುಗಳಿಗೆ ಕಿವಿಗೊಡಬೇಡಿ. ಅಂತಹ ಅನಿರೀಕ್ಷಿತ ವಾತಾವರಣ ಪತ್ರಿಕೋದ್ಯಮದಲ್ಲಿಲ್ಲ. ಒಂದು ವೇಳೆ ಇದ್ದರೂ ನೀವು ನಿಮ್ಮತನವನ್ನು ಬಿಡದೆ ಸರಿಯಾಗಿ ಕೆಲಸ ನಿರ್ವಹಿಸಿ. ವೈಯಕ್ತಿಕವಾಗಿ ಪ್ರಾಮಾಣಿಕರಾಗಿರಿ. ವೃತ್ತಿಧರ್ಮವನ್ನು ಪಾಲಿಸಿ. ಮಿಕ್ಕಿದ್ದೆಲಾ ಒಳ್ಳೆಯದೇ ಆಗುತ್ತದೆ.

– ಜಯರಾಜ್

ವಿವೇಕಾನಂದರು ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದ ಸಂತ: ಪ್ರೊ.ರಾವ್

ಮಂಗಳಗಂಗೋತ್ರಿ: ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೇ ಪರಿಚಯಿಸಿದ ಸಂತರಾಗಿದ್ದಾರೆ ಎಂದು ಖ್ಯಾತ ಇತಿ–ಹಾಸ ಚಿಂತಕ ಹಾಗೂ ಮಂಗಳೂರು ವಿವಿಯ ಇತಿಹಾಸ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ.ಬಿ.ಸುರೇಂದ್ರ ರಾವ್ ಅಭಿಪ್ರಾಯಪಟ್ಟರು.

ಅವರು ಮಂಗಳೂರು ವಿ.ವಿಯ ಮಂಗಳಾ ಸಭಾಂಗಣದಲ್ಲಿ ವಿವಿಯ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಆಶ್ರಯದಲ್ಲಿ ನಡೆದ ಸ್ವಾಮಿ ವಿವೇಕನಂದರ 154ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ವಿವೇಕಾನಂದರು ಹಿಂದಿ, ಫ್ರೆಂಚ್, ಸಂಸ್ಕೃತ, ಬಂಗಾಳಿ, ಇಂಗ್ಲಿಷ್, ಸ್ಪ್ಯಾನಿಷ್ ಸೇರಿದಂತೆ ಹಲವು ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದರು. ವಿವೇಕಾನಂದರು ವೇದ–ಉಪನಿಷತ್‌ಗಳ ಬಗ್ಗೆ ಅಧ್ಯಯನ ಮಾಡಿದ್ದರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ಬಗ್ಗೆ ಸ್ವಾಮಿ ವಿವೇಕಾನಂದರು ತಮ್ಮದೇ ಆದ ಅಭಿಪ್ರಾಯಗಳನ್ನು ಹೊಂದಿದ್ದರು. ಧರ್ಮದ ಬಗೆಗಿನ ವಿವೇಕಾನಂದರ ನಿಲುವುಗಳು ವಿಭಿನ್ನ. ವಿವೇಕಾನಂದರಂತವರನ್ನು ಮತ್ತೆ ಕಾಣಲು ಸಾಧ್ಯವಿಲ್ಲ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿವಿ ಕುಲಪತಿ ಪ್ರೊ.ಕೆ.ಬೈರಪ್ಪ ವಹಿಸಿದ್ದರು. ಇದೇ ಸಂದರ್ಭದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿ ಪ್ರಧಾನಮಂತ್ರಿಗಳಿಂದ ಸರ್ .ಸಿ .ವಿ. ರಾಮನ್ ಜನ್ಮ ಶತಮಾನೋತ್ಸವ ಪ್ರಶಸ್ತಿಯನ್ನು, ಭಾರತೀಯ ವಿಜ್ಞಾನ ಕಾಂಗ್ರೆಸ್‌ನ ತಿರುಪತಿ ಸಮ್ಮೇಳನದಲ್ಲಿ ಇತ್ತೀಚೆಗೆ ಪಡೆದ ಕುಲಪತಿಗಳನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಅಧ್ಯಕ್ಷೀಯ ಭಾಷಣ ಮಾಡಿದ ಪ್ರೊ.ಕೆ.ಬೈರಪ್ಪ, ಅನಿರೀಕ್ಷಿತ ಸನ್ಮಾನ ಬಹಳ ಮುಜುಗರವನ್ನು ತರಿಸುತ್ತದೆ. ಈ ಮೂಲಕ ಜವಾಬ್ದಾರಿ ಮತ್ತು ಮಾಡಬೇಕಾದ ಕೆಲಸಗಳು ಇನ್ನಷ್ಟು ಹೆಚ್ಚಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ನಡೆಸಲಾದ ಭಾಷಣ ಮತ್ತು ದೇಶಭಕ್ತಿಗೀತೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿ ಕುಲಸಚಿವ ಪ್ರೊ.ಕೆ.ಎಂ.ಲೋಕೇಶ್, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಉದಯ ಬಾರ್ಕೂರು ಉಪಸ್ಥಿತರಿದ್ದರು. ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಎಂ.ಖಾನ್ ಸನ್ಮಾನ ಪತ್ರ ವಾಚಿಸಿದರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಧನಂಜಯ ಕುಂಬ್ಳೆ ಕಾರ್ಯಕ್ರಮ ನಿರೂಪಿಸಿದರು.

ಚಿತ್ರ ವಿಮರ್ಶೆ

ಕಿರಿಕ್ ಕ್ರೇಝ್ ಹುಟ್ಟಿಸಿದ ಕಿರಿಕ್ ಪಾರ್ಟಿ

ಇಂದು ಕನ್ನಡ ಸಿನಿಮಾ ರಂಗದಲ್ಲಿ ಕಿರಿಕ್ ಪಾರ್ಟಿ ಸಿನಿಮಾವು ಬಹಳ ಸದ್ದು ಮಾಡುತ್ತಿದೆ. ಎಲ್ಲಿ ನೋಡಿದರೂ ಎಲ್ಲಿ ಕೇಳಿದರೂ ಕಿರಿಕ್ ಪಾರ್ಟಿ ಸಿನಿಮಾದ್ದೇ ಮಾತಾಗಿದೆ. ಕಿರಿಕ್ ಪಾರ್ಟಿ ಅನ್ನುವ ಹೆಸರು ಕೇಳಿದರೆ ಲಾಂಗು ಮಚ್ಚುಗಳ ಸಿನಿಮಾ ಇರಬಹುದೆಂದು ಅನಿಸಿದರೆ ಅದು ತಪ್ಪು, ಈ ಸಿನಿಮಾವು ಸಂಪೂರ್ಣವಾಗಿ ಕಾಲೇಜು ಜೀವನದ ಕಥಾ ವಸ್ತುವನ್ನು ಹೊಂದಿದೆ. ಕಾಲೇಜು ಥೀಮ್ ಇಟ್ಟುಕೊಂಡು ಬಂದಿರುವ ಸಿನಿಮಾ ಆದ್ದರಿಂದ ಯುವಕ ಯುವತಿಯರನ್ನು ಆಕರ್ಷಿಸುವುದರಲ್ಲಿ ಸಿನಿಮಾ ಯಶಸ್ವಿಯಾಗಿದೆ.

ರಕ್ಷಿತ್ ಶೆಟ್ಟಿಯವರ ಕಥೆಯನ್ನು ರಿಷಬ್ ಶೆಟ್ಟಿಯವರು ಉತ್ತಮವಾಗಿ ನಿರ್ದೆಶಿಸಿದ್ದಾರೆ. ಹೊಸ ಪಾತ್ರಗಳ ಪರಿಚಯದೊಂದಿಗೆ ರಕ್ಷಿತ್ ಶೆಟ್ಟಿಯವರ ಪಾತ್ರವು ಉತ್ತಮವಾಗಿದೆ. ಕರ್ಣನ ಹೆಸರಿನ ಪಾತ್ರದಲ್ಲಿ ರಕ್ಷಿತ್ ಶೆಟ್ಟಿಯವರು, ಸಾನ್ವಿ ಪಾತ್ರದಲ್ಲಿ ರಶ್ಮಿಕ ಮತ್ತು ಆರ್ಯಾ ಪಾತ್ರದಲ್ಲಿ ಸಂಯುಕ್ತ ಹೆಗಡೆಯವರು ಜನರ ಹೃದಯವನ್ನು ಗೆದ್ದಿದ್ದಾರೆ. ಇವರೊಂದಿಗೆ ಕರ್ಣನ ಸ್ನೇಹಿತರಾಗಿ ಅರವಿಂದ ಅಯ್ಯರ್, ಧನಂಜಯ್ ರಂಜನ್, ಚಂದನ್ ಪ್ರಮೋದ್ ಶೆಟ್ಟಿ, ಅಶ್ವಿನ್ ರಾವ್ ಉತ್ತಮ ಸಾಥ್ ನೀಡಿದ್ದಾರೆ. ಮೆಕ್ಯಾನಿಕ್ ಪಾತ್ರದಲ್ಲಿ ಅಚ್ಚುತ್ ಕುಮಾರ್ ಉತ್ತಮ ಪತ್ರ ನಿರ್ವಹಿಸಿದ್ದಾರೆ..

ಈ ಚಿತ್ರದಲ್ಲಿ ಬಹು ದೊಡ್ಡ ಆಕರ್ಷಣೆ ಎಂದರೆ ಚಿತ್ರದಲ್ಲಿ ಬಳಸಲಾದ ಕಾರು. ಇದರೊಂದಿಗೆ ಸ್ಕೂಟರ್ ಮತ್ತು ಬುಲೆಟ್ ಬೈಕ್‌ಗಳು ಯುವಕರಿಗೆ ಮತ್ತು ಬೈಕ್ ಪ್ರಿಯರಿಗೆ ಆಕರ್ಷಣೆಯನ್ನು ಜಾಸ್ತಿ ಮಾಡಿದೆ. ಚಿತ್ರದ ಹಾಡುಗಳು ಚಿತ್ರದ ಬಿಡುಗಡೆಯ ಮೊದಲೆ ಸದ್ದು ಮಾಡಿದ್ದು, ಹಾಡುಗಳು ಎಲ್ಲರ ಬಾಯಿಯಲ್ಲಿ ಗುಣಗುವಂತೆ ಮಾಡಿದೆ. ಅಜನೀಶ್ ಲೋಕನಾಥ್

ಅವರ ಸಂಗೀತ ಮತ್ತು ಕರಮ್ ಜಾವಲ ಅವರ ಕೈ ಚಳಕ ಚಿತ್ರದಲ್ಲಿ ಕಾಣಬಹುದು.

ಚಿತ್ರದಲ್ಲಿ ಕಾಲೇಜು ಜೀವನದಲ್ಲಿ ಆಗುವ ಕಿರಿಕ್ ವಿಷಯವನ್ನು ತೋ–ರಿಸಿದ್ದು ಸ್ನೇಹಿತರ ಬಳಗದಲ್ಲಿ ಆಗುವ ಹಾಸ್ಯ ವಿಷಯ ಪ್ರಮುಖ ಆಕರ್ಷಣೆಯಾಗಿದೆ. ಪ್ರಿನ್ಸಿಪಾಲ್ ಕಿಡ್ನಾಪ್ ದೃಶ್ಯ ಅಂತೂ ಎಲ್ಲರನ್ನು ಹಾಸ್ಯದಲ್ಲಿ ತೆಲಿಸುತ್ತದೆ. ಕರ್ಣ ಮತ್ತು ಸಾನ್ವಿಯ ನಡುವಿನ ರೋಮ್ಯಾಂಟಿಕ ಕ್ಷಣವು ಉತ್ತಮವಾಗಿ ಮೂಡಿಬಂದಿದೆ. ಚಿತ್ರವು ಹಾಸ್ಯವಾಗಿ ಸಾಗುತ್ತಿರುವಾಗ ಕಥಾನಾಯಕಿ ಸಾನ್ವಿಯ ಸಾವಿನ ನಂತರ ಸ್ವಲ್ಪ ಗಂಭೀರತೆಯನ್ನು ಪಡೆದುಕೊಳ್ಳುತ್ತದೆ. ನಾಯಕನ 2 ವಿಭಿನ್ನ ರೀತಿಯ ಪಾತ್ರದ ಮುಖವನ್ನು ತೋರಿಸಲಾಗಿದೆ. ದ್ವಿತಿಯಾರ್ಧಕ್ಕೆ ಆರ್ಯ ಪಾತ್ರದ ಪ್ರವೇಶದಿಂದ ತುಸು ತುಂಟತನ ಹಾಸ್ಯ ದೃಶ್ಯವನ್ನು ಕಾಣಬಹುದು. ಚಿತ್ರದ ಕಥೆಯು ಬಹಳ ವೇಗವಾಗಿ ಸಾಗುತ್ತದೆ ಎಂಬ ಅಭಿಪ್ರಾಯ ಸಹ ಮೂಡಿದರೆ ತುಸು ಸಮಯವು ವ್ಯರ್ಥವಾಗುವುದಿಲ್ಲ.

ಕಿರಿಕ್ ಪಾರ್ಟಿ ಚಿತ್ರವು ಈಗಿನ ಯುವಜನತೆಗೆ ಬಹಳ ಇಷ್ಟವಾಗುತ್ತದೆ. ಕಥೆಯು ಪ್ರಸ್ತುತ ದಿನದ್ದು ಆದ್ದರಿಂದ ಇಷ್ಟವಾಗದೆ ಇರಬಹುದು. ಕೊನೆಯ ಬೆಂಚಿನಲ್ಲಿ ಕಾದುಕೊಂಡು ಕ್ಲಾಸುಗಳಿಗೆ ಬಂಕ್ ಹಾಕ್ಕೊಂಡು , ಹುಡುಗಿರ ಹಿಂದೆ ಓಡಾಡಿಕೊಂಡು ಕಾಲೇಜು ಇಲೆಕ್ಷನ್ ಹೀಗೆ, ವಿದ್ಯಾರ್ಥಿ ಜೀವನವನ್ನು ಎಂಜಾಯ್ ಮಾಡಿದ ಪ್ರತಿಯೊಬ್ಬರನ್ನು 'ಕಿರಿಕ್ ಪಾರ್ಟಿ' ಸಿನಿಮಾವು ಕಾಡುವುದಲ್ಲಿ ಸಂದೇಹವಿಲ್ಲ. ಈಗಾಗಲೇ ಚಿತ್ರವು ಅಮೆರಿಕಾ, ಜರ್ಮನಿ, ಯು–ಎಇ, ಫ್ರಾನ್ಸ್, ಮೊದಲಾದ ದೇಶಗಳಲ್ಲಿ ಯಶಸ್ವಿಯಾಗಿ ತೆರೆಕಂಡಿದ್ದು ಇದೀಗ ಶತದಿನೋತ್ಸವದತ್ತ ದಾಪುಗಾಲಿಡುತ್ತಿದೆ.

–ರಕ್ಷಿತಾ.ಕೆ

ವಿದ್ಯಾರ್ಥಿ ಸಂಪಾದಕರು
ಜಯರಾಜ್
ಪ್ರೇಮ
ರಕ್ಷಿತಾ.ಕೆ
ಶ್ವೇತಾ ಕುಮಾರಿ
ಮಾಲತಿ

ಸಂಪಾದಕರು ಹಾಗೂ ಪ್ರಕಾಶಕರು: ಪ್ರೊ. ವಹೀದಾ ಸುಲ್ತಾನ, ಅಧ್ಯಕ್ಷರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ – 574199 ದ.ಕ, ಕಾರ್ಯಕಾರಿ ಸಂಪಾದಕರು: ಪ್ರೊ. ಜಿ. ಪಿ. ಶಿವರಾಂ. ಮುದ್ರಕರು: ನೆಡ್ ಪ್ರಿಂಟ್, ಯೆಯ್ಯಾಡಿ–575008